# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/166ನೇ ಮುಂದೂಡಿದ /ಸಾ.ಸ/2022–23

ಜ್ಞಾನಭಾರತಿ
ಬೆಂಗಳೂರು–560 056
ದಿನಾಂಕ: 07–11–2022

**ಗೆ,**

***ಸಿಂಡಿಕೇಟ್ ಸದಸ್ಯರು,***
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಮಾನ್ಯರೆ,**

**ವಿಷಯ:** ದಿನಾಂಕ 31–10–2022 ರಂದು ಜರುಗಿದ ಮುಂದೂಡಿದ 166 ನೇ ಸಿಂಡಿಕೇಟ್ ಸಭೆಯ ನಡಾವಳಿಗಳು.

***

ದಿನಾಂಕ 31–10–2022 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು–560 001, ಇಲ್ಲಿ ಜರುಗಿದ ಮುಂದೂಡಿದ 166 ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಕುಲಸಚಿವರು**

ಲಗತ್ತು: ಮೇಲಿನಂತೆ.

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/166ನೇ ಮುಂದೂಡಿದ /ಸಾ.ಸ/2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 07.11.2022

**ದಿನಾಂಕ 31-10-2022 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560 001, ಇಲ್ಲಿ ಜರುಗಿದ ಮುಂದೂಡಿದ 166 ನೇ ಸಿಂಡಿಕೇಟ್ ಸಭೆಯ ನಡಾವಳಿಗಳು.**

<u>ಹಾಜರಾದ ಸದಸ್ಯರು:</u>

| | | |
|---|---|---|
| 1. ಪ್ರೊ. ಡಾ. ಜಯಕರ ಎಸ್ ಎಂ<br>ಕುಲಪತಿಗಳು | - | ಸಭಾಧ್ಯಕ್ಷರು |
| 2. ಪ್ರೊ. ಸಿಂಥಿಯಾ ಮೆನೇಜಸ್ | - | ಸದಸ್ಯರು |
| 3. ಡಾ. ಸುಧಾಕರ್. ಎಚ್ | - | ಸದಸ್ಯರು |
| 4. ಶ್ರೀ ಎಂ. ಉದಯಕುಮಾರ್ | - | ಸದಸ್ಯರು |
| 5. ಡಾ. ಸಿ.ಆರ್. ಮಹೇಶ್ | - | ಸದಸ್ಯರು |
| 6. ಶ್ರೀ ಗೋಪಿನಾಥ್ | - | ಸದಸ್ಯರು |
| 7. ಡಾ. ಎಂ.ವಿ. ಆಶಾ | - | ಸದಸ್ಯರು |
| 8. ಪ್ರೊ. ಟಿ.ವಿ. ರಾಜು | - | ಸದಸ್ಯರು |
| 9. ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ | - | ಸದಸ್ಯರು |
| 10. ಪ್ರೊ. ವಿ.ವಿ. ಸುರೇಶ್ ಬಾಬು | - | ಸದಸ್ಯರು |
| 11. ಶ್ರೀಮತಿ ತೇಜಸ್ವಿನಿ | - | ಸದಸ್ಯರು |
| 12. ಶ್ರೀ ಹರೀಶ್ ನಾಯ್ಕ್ | - | ಸದಸ್ಯರು |
| 13. ಡಾ. ಕೆ.ವಿ. ಮಹೇಶ್ವರಯ್ಯ | - | ಸದಸ್ಯರು |
| 14. ಶ್ರೀಮತಿ ಕ್ಷಮಾ ಕುಲಕರ್ಣಿ | - | ಸದಸ್ಯರು |
| 15. ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 16. ಶ್ರೀ. ಎನ್. ಮಹೇಶ್ ಬಾಬು, ಕೆ.ಎ.ಎಸ್.<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |
| 17. ಶ್ರೀ ಅಜಿತ್ ಕುಮಾರ್ ಹೆಗ್ಡೆ<br>ವಿತ್ತಾಧಿಕಾರಿಯವರು | - | ವಿಶೇಷ ಆಹ್ವಾನಿತರು |

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಗಳಲ್ಲಿ ಕೋರಿದರು.

ಕುಲಪತಿಗಳು ಸದಸ್ಯರೆಲ್ಲರಿಗೂ ಮತ್ತೊಮ್ಮೆ ಸ್ವಾಗತ ಕೋರಿ ಹಿಂದಿನ ಸಿಂಡಿಕೇಟ್ ಸಭೆಯ ದಿನಾಂಕದಿಂದ ಇಲ್ಲಿಯವರೆಗೆ ವಿಶ್ವವಿದ್ಯಾಲಯದಲ್ಲಿ ನಡೆದ ಘಟನೆಗಳು ಹಾಗೂ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ದಿನಾಂಕ: 10-10-2022ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಬಿ.ಎಂ.ಟಿ.ಸಿ. ಬಸ್ ಹರಿದು ಅಪಘಾತಕ್ಕೀಡಾದ ಕು. ಶಿಲ್ಪಶ್ರೀ ಅವರು ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ: 23-10-2022ರಂದು ನಿಧನರಾಗಿದ್ದರಿಂದ ಅವರು ಹಾಗೂ ಸಿಂಡಿಕೇಟ್ ಸದಸ್ಯರುಗಳು ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಕು. ಶಿಲ್ಪಶ್ರೀ ಅವರ ಮನೆಗೆ ಭೇಟಿ ನೀಡಿ ಸದರಿ ವಿದ್ಯಾರ್ಥಿನಿಯ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದ್ದಾಗಿ ಅವರ ಕುಟುಂಬಕ್ಕೆ ಸಾಧ್ಯವಾಗುವ ಮಟ್ಟಿಗೆ ನೆರವು ದೊರಕಿಸಿಕೊಡುವುದಾಗಿ ತಿಳಿಸಲಾಗಿದೆ. ಮೇಲ್ಕಂಡ ವಿದ್ಯಾರ್ಥಿನಿಯಲ್ಲದೇ ಇತಿಹಾಸ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾದ ಶ್ರೀ ರಾಮಾಂಜನಪ್ಪ ಅವರು ವಿಶ್ವವಿದ್ಯಾಲಯದ ರಸ್ತೆಯಲ್ಲಿ ಹೊಸದಾಗಿ ನಿರ್ಮಿಸಿದ ರಸ್ತೆ ಉಬ್ಬಿನಲ್ಲಿ ವಾಹನ ಅಪಘಾತಕ್ಕೀಡಾದ್ದರಿಂದ ಅವರಿಗೆ ನಿಮ್ಹ್ಯಾನ್ಸ್ ಆಸ್ಪತ್ರೆಯಲ್ಲಿ ಸ್ಥಳಾವಕಾಶ ದೊರಕದ ಕಾರಣ ಅಭಯ ಆಸ್ಪತ್ರೆಯಲ್ಲಿ ಕೊಡಿಸಿದ ಚಿಕಿತ್ಸೆಯ ವೆಚ್ಚವನ್ನು ಸಿಂಡಿಕೇಟ್ ಅನುಮೋದನೆಗೆ ಮಂಡಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಕಚೇರಿಗಳು ಹಾಗು ಅಧ್ಯಯನ ವಿಭಾಗಗಳಿಗೆ ಪ್ರೊ. ಎಸ್.ಆರ್. ನಿರಂಜನ, ನಿವೃತ್ತ ಕುಲಪತಿಗಳು, ಗುಲ್ಬರ್ಗಾ ವಿಶ್ವವಿದ್ಯಾಲಯ ಇವರ ನೇತೃತ್ವದಲ್ಲಿನ Academic and Administrative Audit ಸಮಿತಿಯು ಭೇಟಿ ನೀಡಿ ನಾಲ್ಕು ದಿನಗಳ ಕಾಲ ಪರಿಶೀಲಿಸಿದೆ. ಸದರಿ ಸಮಿತಿಯ ವರದಿ ಬಂದನಂತರ ಕ್ರಮ ಕೈಗೊಳ್ಳಲಾಗುವುದು. ಸರ್ಕಾರದ ನಿರ್ದೇಶನದನುಸಾರ ದಿನಾಂಕ: 28-10-2022ರಂದು 'ಕೋಟಿ ಕಂಠ ಗೀತ ಗಾಯನ' ಹಾಗೂ ದಿನಾಂಕ: 28-10-2022 ರಿಂದ 31-10-2022ರ ವರೆಗೆ 'ಸರ್ದಾರ್ ವಲ್ಲಭಾಯ್ ಪಟೇಲ್' ಅವರ ಜನ್ಮದಿನದ ಹಾಗೂ ಭಾರತ ಏಕೀಕರಣದ ದಿನದ ಅಂಗವಾಗಿ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತೆಂದು ಸಿಂಡಿಕೇಟ್ ಗಮನಕ್ಕೆ ತಂದರು.

ಕಾರ್ಯ ಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳುವ ಮುಂಚಿತವಾಗಿ ಕೆಳಕಂಡ ಚರ್ಚೆಗಳೊಂದಿಗೆ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು:

1. ಶ್ರೀ ಗೋಪಿನಾಥ್ ಅವರು ಮಾತನಾಡಿ, ಎಂ.ಎಸ್.ಡಬ್ಲ್ಯೂ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅರ್ಹತೆಯನ್ನು ಈ ಹಿಂದೆ ಬಿ.ಎ. ಹಾಗೂ ಬಿ.ಎಸ್.ಡಬ್ಲ್ಯೂ ಪದವೀಧರರು ಮಾತ್ರ ಅರ್ಹತೆ ಹೊಂದಿದ್ದರು. ಆದರೆ, ಕಳೆದ ಸಾಲಿನಲ್ಲಿ ಈ ಬಗ್ಗೆ ಕಾಲೇಜುಗಳು ಮನವಿ ಸಲ್ಲಿಸಿದ್ದರು ಹಾಗೂ ನಾನೂ ಸಹ ಪ್ರವೇಶಾತಿ ಅರ್ಹತೆಯನ್ನು ಮಾರ್ಪಡಿಸಬೇಕೆಂದು ಕೋರಿದ್ದೆ. ಈಗಾಗಲೇ ಅಧ್ಯಯನ ಮಂಡಳಿ ಹಾಗೂ ವಿದ್ಯಾವಿಷಯಕ ಪರಿಷತ್ತು ಎಂ.ಎಸ್.ಡಬ್ಲ್ಯೂ ಕೋರ್ಸಿನ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಎಲ್ಲಾ ಸ್ನಾತಕ ಪದವಿಯಲ್ಲಿ ಉತ್ತೀರ್ಣರಾದ ಪದವೀಧರ ಅಭ್ಯರ್ಥಿಗಳು ಪ್ರವೇಶಾತಿ ಪಡೆದುಕೊಳ್ಳಲು ಅರ್ಹರೆಂದು ತಿದ್ದುಪಡಿ ಮಾಡಲಾಗಿದೆ. ತಿದ್ದುಪಡಿಯನ್ನು ಸರ್ಕಾರದ ಅನುಮೋದನೆಗೆ

ಕಳುಹಿಸಿಕೊಡಲಾಗಿದೆ. ಆದಕಾರಣ ಕಳೆದವಾರ 2022-23ನೇ ಸಾಲಿಗೆ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಬೆಂಗಳೂರು ವಿಶ್ವವಿದ್ಯಾಲಯವು ಹೊರಡಿಸಿರುವ ಪ್ರಕಟಣೆ ಹಾಗೂ ಮಾರ್ಗಸೂಚಿಗಳಿಗೆ ತಿದ್ದುಪಡಿ ಹೊರಡಿಸಿ ಮೇಲ್ಕಂಡ ಕೋರ್ಸಿಗೆ ಎಲ್ಲಾ ಸ್ನಾತಕ ಪದವಿಯಲ್ಲಿ ಉತ್ತೀರ್ಣರಾದ ಪದವೀಧರ ಅಭ್ಯರ್ಥಿಗಳು ಪ್ರವೇಶಾತಿ ಪಡೆದುಕೊಳ್ಳಲು ಅವಕಾಶ ನೀಡಬೇಕೆಂದು ಕೋರಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಎಂ.ಎಸ್.ಡಬ್ಲ್ಯೂ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಸಂಬಂಧಪಟ್ಟ ವಿನಿಯಮ ತಿದ್ದುಪಡಿಗೆ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ, ಸದರಿ ಕೋರ್ಸಿನ ಪ್ರವೇಶಾತಿಗೆ 'ಕೋರ್ಸಿಗೆ ಎಲ್ಲಾ ಸ್ನಾತಕ ಪದವಿಯಲ್ಲಿ ಉತ್ತೀರ್ಣರಾದ ಪದವೀಧರ ಅಭ್ಯರ್ಥಿಗಳು ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ಅರ್ಹರೆಂದು' ತಿದ್ದುಪಡಿ ಮಾಡಲು ಸಿಂಡಿಕೇಟ್ ನಿರ್ಣಯಿಸಿತು. ಈ ಬಗ್ಗೆ ತಿದ್ದುಪಡಿಯನ್ನು ಹೊರಡಿಸಲು ಸೂಚಿಸಿತು.

2. ಶ್ರೀ ಗೋಪಿನಾಥ್ ಅವರು ಮುಂದುವರೆದು ಮಾತನಾಡಿ ವಿಶ್ವವಿದ್ಯಾಲಯವು ಕಳೆದ ಸಾಲಿನಲ್ಲಿ ಅವರ ನೇತೃತ್ವದಲ್ಲಿ ಸ್ವಚ್ಛತಾ ಸಮಿತಿಯನ್ನು ನೇಮಿಸಿದ್ದಾಗಿ ಹಾಗೂ ಖಾಸಗಿ ಸಂಸ್ಥೆಯ ಸಹಕಾರದೊಂದಿಗೆ ಜ್ಞಾನಭಾರತಿ ಆವರಣದಲ್ಲಿ ಸ್ವಚ್ಛತಾ ಕಾರ್ಯವನ್ನು ಹಮ್ಮಿಕೊಂಡು ತ್ಯಾಜ್ಯಗಳನ್ನು ತೆರವುಗೊಳಿಸಲಾಗಿತ್ತು. ಆ ಬಗ್ಗೆ ರೂ.4.00 ಲಕ್ಷಗಳಷ್ಟು ಖರ್ಚು ಮಾಡಲಾಗಿತ್ತು. ಆದರೆ ಮತ್ತೆ ಜ್ಞಾನಭಾರತಿ ಆವರಣವು ತ್ಯಾಜ್ಯ ವಸ್ತುಗಳಿಂದ ಆವರಿಸಿದೆ. ಆದಕಾರಣ ಟೆಂಡರ್ ಕರೆದು ಒಂದು ಶಾಶ್ವತ ಪರಿಹಾರ ಕಂಡುಕೊಳ್ಳುವುದು ಸೂಕ್ತವೆಂದು ತಿಳಿಸಿ, ತ್ಯಾಜ್ಯದ ತೆರವಿಗೆ ಪ್ರತಿದಿನ ಒಂದು ವಾಹನದ ವ್ಯವಸ್ಥೆಯನ್ನು ಹಾಗೂ ವಿಭಾಗಗಳ ಮುಂದೆ ಕಸದ ಡಬ್ಬಿಗಳನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಈಗಗಲೇ ರಚಿಸಿರುವ ಸಮಿತಿಗೆ ಅವಧಿ ಇರುವ ಮತ್ತೊಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಿ ಸಮಿತಿಯ ಕಾರ್ಯಗಳನ್ನು ಮುಂದುವರೆಯುವಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಈ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿ, ಪ್ರಸ್ತುತ ನಡೆಯುತ್ತಿರುವ ಸ್ನಾತಕೋತ್ತರ ಪರೀಕ್ಷೆಗಳ ನಂತರ, ಎನ್.ಎಸ್.ಎಸ್. ಘಟಕ ಶಿಕ್ಷಕರು ಹಾಗೂ ವಿದ್ಯಾರ್ಥಿಗಳನ್ನೊಳಗೊಂಡಂತೆ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿದರು.

3. ಈ ಹಂತದಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಸಿಂಡಿಕೇಟ್‌ಗೆ ಮನವಿ ಸಲ್ಲಿಸಿ, 1) ಜೆ.ಆರ್.ಎಫ್. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಬೇಕು 2) ಡಾ. ರಾಜಪ್ಪ ದಳವಾಯಿ, ಕನ್ನಡ ಅಧ್ಯಾಪಕರು ಇವರಿಗೆ ಮುಂಬಡ್ತಿ ನೀಡಬೇಕು, 3) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ

ಕಿರುಪ್ರಬಂಧ ಸಲ್ಲಿಸಲು ಹಣಕಾಸು ನೆರವು ನೀಡಬೇಕು, 4) ಸ್ಥಗಿತಗೊಳಿಸಿರುವ ಪಿ.ಜಿ.–3 ಹಾಸ್ಟೆಲ್‌ನ ಮೆಸ್ ಅನ್ನು ಪ್ರಾರಂಭಿಸಿ ಉಚಿತವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪರೀಕ್ಷೆ ಮುಗಿಯುವವರೆಗೂ ಊಟದ ವ್ಯವಸ್ಥೆ ಕಲ್ಪಿಸಬೇಕು, 5) ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳಿಗೂ ಸಿ.ಎಸ್.ಆರ್. ನಿಧಿಯಿಂದ ಉಚಿತ ಲ್ಯಾಪ್‌ಟಾಪ್ ನೀಡಲು ವ್ಯವಸ್ಥೆ ಮಾಡಬೇಕು, 6) ಎಲ್ಲಾ ವಿದ್ಯಾರ್ಥಿಗಳ ಪರೀಕ್ಷಾ ಹಾಗೂ ಪ್ರಯೋಗಾಲಯ ಶುಲ್ಕಗಳನ್ನು ಕಡಿಮೆ ಮಾಡಬೇಕೆಂದು ಕೋರಿದರು 7) ಅಂಗವಿಕಲ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಸೌಲಭ್ಯಗಳನ್ನು ನೀಡುವುದು, 8) ಒ.ಬಿ.ಸಿ. ಕೋಶವನ್ನು ಆಡಳಿತ ಕಚೇರಿಗೆ ವರ್ಗಾಯಿಸಬೇಕು, 9) ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ವಿಳಂಬವಿಲ್ಲದೆ ಕೂಡಲೇ ಆಚರಿಸಲು ಕ್ರಮ ಕೈಗೊಳ್ಳಬೇಕು, 10) ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಬೇಕು 11) ಮೃತ ಸ್ನಾತಕೋತ್ತರ ವಿದ್ಯಾರ್ಥಿನಿ ಕು. ಶಿಲ್ಪಶ್ರೀ ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡಬೇಕೆಂದು ಕೋರಿದರು.

4. ಜೆ.ಆರ್.ಎಫ್. ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವ ಬಗ್ಗೆ ಹಾಗೂ ಕು. ಶಿಲ್ಪಶ್ರೀ ಅವರ ಕುಟುಂಬಕ್ಕೆ ನೆರವು ನೀಡುವ ಬಗ್ಗೆ ಸಂಬಂಧಿಸಿದ ವಿಷಯ ಸೂಚಿಗಳನ್ನು ಮಂಡಿಸಲಾಗಿದ್ದು, ಉಳಿದ ಮನವಿಗಳ ಬಗ್ಗೆ ಸಾಮಾನ್ಯ ಚರ್ಚೆಯಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಕಾರ್ಯಸೂಚಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

***Proceedings of the 166th Adjourned meeting of the Syndicate held on 31.10.2022***

**Item No.05:** To consider the recommendation of the Selection Committee for Promotion of UGC teachers-reg.

Sri M. Udayakumar expressed that the procedural lapses in promotion process of the teachers pointed out by him in the previous meeting have not been answered so far. He informed that the then Registrar intimated in a meeting that he has not signed the related files and the meeting notice of the Selection Committee meetings. The revised Statutes approved by the State Government has not been brought to the notice of the Syndicate. The Deans have not attended the meetings. He urged to redo the process.

Prof. Cynthia Menezes informed that she did not attend the Selection Committee meeting in the capacity of the Dean as she was unwell on that day and she was preoccupied on the day of the Scrutiny Committee meeting.

Dr. H. Sudhakara sought to know the provisions under which notification was issued by inviting applications without the approval of Statutes and applications were received for CAS promotion.

Dr. C.R. Mahesh opined that the State Government has approved the relevant Statutes and the approval of the Syndicate is not necessary to notify the same. As per the UGC guidelines, the quorum for conducting Selection Committee meeting for promotion of teachers under CAS is four and there is no provision in the Statutes to redo the process. He requested to approve the proceedings of the Selection Committee meetings.

Prof. J.T. Devaraju endorsed the opinion of Dr. C.R. Mahesh and insisted to open the sealed cover containing proceedings of the Selection Committee, etc., expressed that there is no point in discussing the issues without knowing the actual recommendations of the Selection Committees.

Prof. V.V. Suresh Babu opined that the CAS promotions may be extended to teachers by considering the proceedings of the Selection Committee. The procedural lapses if any shall be set right in the next process.

***Resolution:***

After detailed discussions, the Syndicate resolved to constitute the following Committee to verify the procedures followed while conducting Selection Committee meetings in respect of promotion of teachers listed in the agenda note.

1. The Registrar - Chairman
2. Prof. T.V. Raju - Member
3. Dr. H. Sudhakara - Member
4. P.S. to Registrar - Convenor

The Syndicate further resolved that orders be issued to concerned teachers, if proper procedures were followed as per Statutes/UGC Regulations, while conducting Selection Committee meetings and to place the matter before the Syndicate for ratification.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 07:** ಬೆಂಗಳೂರು ವಿಶ್ವವಿದ್ಯಾಲಯದ ಯು.ವಿ.ಸಿ.ಇ ಯಲ್ಲಿ ದಿನಾಂಕ 07.05.2022 ರಂದು ನಡೆಸಲಾಗಿರುವ ಸ್ನಾತಕ ಮತ್ತು ಸ್ನಾತಕೋತ್ತರ 2019-20 ಹಾಗೂ 2020-21ನೇ ಸಾಲಿನ "ಗ್ರಾಜ್ಯುಯೇಷನ್ ಡೇ" ಕಾರ್ಯಕ್ರಮಕ್ಕೆ ಹಣ ಮಂಜೂರು ಮಾಡುವ ಬಗ್ಗೆ.

ಡಾ. ಸುಧಾಕರ ಎಚ್ ಅವರು ಮಾತನಾಡಿ, ವಿಶ್ವವಿದ್ಯಾಲಯದ ವಿಭಾಗಗಳು ಹಾಗೂ ಘಟಕ ಕಾಲೇಜುಗಳು ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ, ಸಿಂಡಿಕೇಟ್ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಯನ್ನು ಕಳುಹಿಸಿಕೊಡುವುದಿಲ್ಲ ಮತ್ತು ಕೆಲವು ವಿಭಾಗಗಳು ಕಾರ್ಯಕ್ರಮವಾದ ನಂತರ ಘಟನೋತ್ತರವಾಗಿ ವೆಚ್ಚ ಮರುಪಾವತಿಗೆ ಮನವಿ ಸಲ್ಲಿಸುತ್ತಿರುವುದು ಸರಿಯಾದ ಕ್ರಮವಲ್ಲ. ಕಾರ್ಯಕ್ರಮಗಳಿಗೆ ಅತಿಥಿಗಳನ್ನು ಪೂರ್ವಾನುಮತಿ ಪಡೆಯದೇ ವಿಭಾಗದ ಮಟ್ಟದಲ್ಲೇ ನಿರ್ಧರಿಸುವುದು ಶಿಷ್ಟಾಚಾರವಲ್ಲ ಹಾಗೂ ವಿಭಾಗಗಳು ನಡೆಸುವ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳಲ್ಲಿ ಸಿಂಡಿಕೇಟ್ ಸದಸ್ಯರುಗಳ ಹೆಸರುಗಳನ್ನು ನಮೂದಿಸಬೇಕೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಯು.ವಿ.ಸಿ.ಇ ಯಲ್ಲಿ ದಿನಾಂಕ 07.05.2022 ರಂದು ನಡೆಸಲಾಗಿರುವ ಸ್ನಾತಕ ಮತ್ತು ಸ್ನಾತಕೋತ್ತರ 2019-20 ಹಾಗೂ 2020-21ನೇ ಸಾಲಿನ "ಗ್ರಾಜ್ಯುಯೇಷನ್ ಡೇ" ಕಾರ್ಯಕ್ರಮಕ್ಕೆ ವೆಚ್ಚ ಮಾಡಿರುವ ರೂ.9,04,557/-(ಒಂಬತ್ತು ಲಕ್ಷದ ನಾಲ್ಕು ಸಾವಿರದ ಐದುನೂರಾ ಐವತ್ತೇಳು ರೂಪಾಯಿಗಳು) ಮೊತ್ತವನ್ನು ಮಂಜೂರು ಮಾಡಲು ಸಿಂಡಿಕೇಟ್ ನಿರ್ಣಯಿಸಿ, ಸದರಿ ವೆಚ್ಚಕ್ಕೆ ಸಂಬಂಧಿಸಿದಂತೆ ವೋಚರ್/ಬಿಲ್ಲುಗಳನ್ನು ಕೂಲಂಕುಷವಾಗಿ ವಿತ್ತಾಧಿಕಾರಿಗಳು ಪರಿಶೀಲಿಸಬೇಕೆಂದು ಸೂಚಿಸಿತು.

ಮುಂದುವರೆದು, ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ವಿಭಾಗಗಳ ಮುಖ್ಯಸ್ಥರುಗಳಿಗೆ ಸುತ್ತೋಲೆ ಕಳುಹಿಸಿ, ಯಾವುದೇ ಕಾರ್ಯಕ್ರಮ ಹಮ್ಮಿಕೊಳ್ಳುವ ಮೊದಲು ಅತಿಥಿಗಳನ್ನು ಆಹ್ವಾನಿಸುವ ಬಗ್ಗೆ ಕುಲಪತಿಗಳಿಂದ ಪೂರ್ವಾನುಮತಿ ಪಡೆಯಲು, ಸಿಂಡಿಕೇಟ್ ಸದಸ್ಯರುಗಳನ್ನು ಆಹ್ವಾನಿಸಲು ಹಾಗೂ ಮುಂಚಿತವಾಗಿ ಕಾರ್ಯಕ್ರಮದ ವೆಚ್ಚವನ್ನು ಮಂಜೂರು ಮಾಡಿಸಿಕೊಳ್ಳಲು ಸೂಚಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 08:** ವಿಶ್ವವಿದ್ಯಾಲಯದ ಪರವಾಗಿ ವಾದವನ್ನು ಮಂಡಿಸುವ ವಕೀಲರುಗಳಿಗೆ ವೃತ್ತಿ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಕೆಲವು ವಕೀಲರು ವಿಶ್ವವಿದ್ಯಾಲಯದ ಪರವಾಗಿ ನ್ಯಾಯಾಲಯದಲ್ಲಿ ಹಾಜರಿರದ ಕಾರಣ ಹಾಗೂ ಕೆಲವು ಪ್ರಕರಣಗಳಲ್ಲಿ ವಿಶ್ವವಿದ್ಯಾಲಯದ ಸಂಬಂಧಪಟ್ಟ ವಿಭಾಗದೊಂದಿಗೆ ಚರ್ಚಿಸಿ ಮಾಹಿತಿ ಪಡೆದು, ಸಮರ್ಥವಾಗಿ ವಾದ ಮಂಡಿಸದ ಕಾರಣ ಬಹುತೇಕ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯದ ವಿರುದ್ಧವಾಗಿ ನ್ಯಾಯಾಲಯದ ತೀರ್ಪು ಬರುತ್ತದೆ. ಆದಕಾರಣ ಸಮರ್ಥವಾಗಿ ವಾದಮಂಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ ಹಾಗೂ ವಕೀಲರಿಗೆ ನೀಡುತ್ತಿರುವ ವೃತ್ತಿ ಸಂಭಾವನೆಯು ಬಹಳ ಕಡಿಮೆ ಇರುವುದರಿಂದ, ದರ ಪರಿಷ್ಕರಿಸಬೇಕೆಂದು ತಿಳಿಸಿದರು.

ಶ್ರೀ ಗೋಪಿನಾಥ್ ಅವರು ಮಾತನಾಡಿ, ಸಮರ್ಥವಾಗಿ ವಾದ ಮಂಡಿಸಿ ವಿಶ್ವವಿದ್ಯಾಲಯದ ಪರವಾಗಿ ತೀರ್ಪು ಬಂದ ಪ್ರಕರಣಗಳಲ್ಲಿ ವಕೀಲರಿಗೆ ಪ್ರೋತ್ಸಾಹಕ ಧನ ನೀಡಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ನ್ಯಾಯಾಲಯದ ಮುಂದಿರುವ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ದಾವೆಗಳ ಪ್ರಾಮುಖ್ಯತೆಯ ಅನುಸಾರ ಸಂಭಾವನೆ ನಿಗದಿಪಡಿಸಬೇಕಾಗುತ್ತದೆ ಎಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಸಾಮಾನ್ಯ ಪ್ರಕರಣಗಳಿಗೆ ಅಂದರೆ, ಪ್ರವೇಶ ಅನುಮೋದನೆ, ಪರೀಕ್ಷಾ ಫಲಿತಾಂಶ ಬಿಡುಗಡೆ, ವಿದ್ಯಾರ್ಥಿ ಹೆಸರು ಬದಲಾವಣೆ ಮುಂತಾದ ಸಾಮಾನ್ಯ ಪ್ರಕರಣಗಳಿಗೆ ಪ್ರಸ್ತುತ ನೀಡುತ್ತಿರುವ ವೃತ್ತಿ ಸಂಭಾವನೆಯ ಮೊತ್ತವನ್ನು ದ್ವಿಗುಣಗೊಳಿಸಿ ಮೊತ್ತವನ್ನು ನಿಗದಿಪಡಿಸಬೇಕೆಂದು ಹಾಗೂ ಪ್ರಾಮುಖ್ಯತೆ ಇರುವ ಮೊಕದ್ದಮೆಗಳು ಅಂದರೆ, ನೇಮಕಾತಿ, ಸಿಬ್ಬಂದಿ ಸೇವಾ ಪ್ರಕರಣಗಳು, ಸಂಯೋಜನೆ, ಹಣಕಾಸು, ಜಮೀನು ವಿವಾದ, ನ್ಯಾಯಾಂಗ ನಿಂದನಾ ಅರ್ಜಿ ಪ್ರಕರಣಗಳಲ್ಲಿ ಹಾಗೂ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರು ಪ್ರಮುಖ ಮೊಕದ್ದಮೆ ಎಂದು ಪರಿಗಣಿಸುವ ಪ್ರಕರಣಗಳಲ್ಲಿ ಇತರೇ ವಿಶ್ವವಿದ್ಯಾಲಯಗಳಲ್ಲಿ ಅಂದರೆ, ಬೆಂಗಳೂರು ನಗರ ವಿಶ್ವವಿದ್ಯಾಲಯ ನಿಗದಿಪಡಿಸಿರುವ ದರಗಳಂತೆ, ಬೆಂಗಳೂರು ವಿಶ್ವವಿದ್ಯಾಲಯದ ವಕೀಲರ ಸಂಭಾವನೆಯನ್ನು ನಿಗದಿಪಡಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 09:** ಬೆಂಗಳೂರು ವಿಶ್ವವಿದ್ಯಾಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಪತ್ರಿಕೆಗಳಲ್ಲಿ ನೀಡಿರುವ ಜಾಹಿರಾತಿನ ಪ್ರಕಟಣೆಗೆ ತಗುಲಿರುವ ವೆಚ್ಚವನ್ನು ಮೆ॥ ಜಗದಾಳೆ ಅಡ್ವರ್ಟೈಸಿಂಗ್, ಬೆಂಗಳೂರು, ಇವರಿಗೆ ಪಾವತಿಸಲು ಸಿಂಡಿಕೇಟ್ ಸಭೆ ಅನುಮೋದನೆಯನ್ನು ಕಾಯ್ದಿರಿಸಿ ಹೊರಡಿಸಿರುವ ಆದೇಶವನ್ನು ಅನುಸಮರ್ಥಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಪತ್ರಿಕೆಗಳಲ್ಲಿ ಜಾಹೀರಾತು ನೀಡಿರುವ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಂಗೀಕೃತ ಸಂಸ್ಥೆಯಾದ ಮೆ॥ ಜಗದಾಳೆ ಅಡ್ವರ್ಟೈಸಿಂಗ್, ಬೆಂಗಳೂರು, ಇವರಿಗೆ ಜಾಹೀರಾತು ವೆಚ್ಚ ರೂ.7,52,686/- (ಏಳು ಲಕ್ಷದ ಐವತ್ತೆರಡು ಸಾವಿರದ ಆರುನೂರ ಎಂಭತ್ತಾರು ರೂಪಾಯಿಗಳು)ಅನ್ನು ಪಾವತಿಸಿ ಹೊರಡಿಸಿರುವ ಆದೇಶವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 10:** ಬೆಂಗಳೂರು ವಿಶ್ವವಿದ್ಯಾಲಯದ ವಯೋನಿವೃತ್ತ ಪ್ರಾಧ್ಯಾಪಕರುಗಳಿಗೆ ಮತ್ತು ನಿವೃತ್ತ ಶಿಕ್ಷಕೇತರ ನೌಕರರ ಸಂಘ (ನೋಂ) ಮತ್ತು The Karnataka Association for the Advancement of Science ರವರುಗಳಿಗೆ ಕೊಠಡಿಯನ್ನು ನೀಡುವುದರ ಬಗ್ಗೆ.

ಡಾ. ಸಿ.ಆರ್. ಮಹೇಶ್ ಅವರು ಮಾತನಾಡಿ, The Karnataka Association for the Advancement of Science ಇವರಿಗೆ ಜಾಗ ನೀಡಿದಲ್ಲಿ, ವಿಶ್ವವಿದ್ಯಾಲಯದ ವಿಭಾಗಗಳು ಸಂಶೋಧನೆಗೆ ಹಾಗೂ ವಿದ್ಯಾರ್ಥಿಗಳಿಗೆ ಆಗುವ ಪ್ರಯೋಜನಗಳು ಏನು ಎಂಬುದರ ಬಗ್ಗೆ ಮಾಹಿತಿ ಕೋರಿದರು ಹಾಗೂ ಈ ಎಲ್ಲಾ ಸಂಸ್ಥೆಗಳಿಗೆ ಜಾಗ ನೀಡಲು ವಿಶ್ವವಿದ್ಯಾಲಯದಲ್ಲಿ ಸ್ಥಳಾವಕಾಶವಿದೆಯೇ ಎಂಬುದರ ಬಗ್ಗೆ ಮಾಹಿತಿ ಕೋರಿದರು. ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ಈ ಹಿಂದೆ ಸೆಂಟ್ರಲ್ ಕಾಲೇಜು ಆವರಣದಲ್ಲಿ The Karnataka Association for the Advancement of Science ಇವರು ನಡೆಸುತ್ತಿದ್ದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರ ಕ್ಷೇಮಾಭಿವೃದ್ಧಿ ಪರಿಷತ್ತು ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಶಿಕ್ಷಕೇತರ ನೌಕರರ ಸಂಘ ಇವರುಗಳು ವಿಶ್ವವಿದ್ಯಾಲಯದ ಆವರಣದಲ್ಲಿ ತಮ್ಮ ಸಂಘದ ಚಟುವಟಿಕೆಗಳಿಗೆ ಕೊಠಡಿ ನೀಡಬೇಕೆಂದು ನೀಡಿರುವ ಮನವಿಯನ್ನು ತಿರಸ್ಕರಿಸಲು ಹಾಗೂ The Karnataka Association for the Advancement of Science ಇವರಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಹಾಗೂ ವಿಭಾಗಗಳ ಸಂಶೋಧನೆಗೆ ಆಗುವ ಪ್ರಯೋಜನ ಹಾಗೂ ಕರ್ನಾಟಕ ಸರ್ಕಾರದಿಂದ

ಸದರಿ ಸಂಸ್ಥೆಗೆ ಮಂಜೂರಾಗಿರುವ ಅನುದಾನದ ವಿವರಗಳನ್ನು ಒಳಗೊಂಡಂತೆ ಕ್ರಿಯಾಯೋಜನೆಯನ್ನು ಪಡೆದುಕೊಂಡು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ನಿರ್ಣಯಿಸಿತು.

***Proceedings of the 166th Adjourned meeting of the Syndicate held on 31.10.2022***

**Item No. 11:** Declaration of probationary period of Smt Manasa.H, Assistant Professor & Dr. Vasundara Priyadarshini, Assistant Professor appointed under Backlog Vacancy.

***Resolution:***

After detailed discussion, the Syndicate resolved to declare the probationary period of the following Assistant Professors as satisfactory as per KCSR rule 1977.

| Sl. No. | Name of the Teacher | Department | Date of completion of probationary period |
|---|---|---|---|
| 1. | Smt. Manasa H | Civil Engineering | 06.05.2022 |
| 2. | Dr. Vasundara Priyadarshini | Mass Communication | 04.08.2022 |

***Proceedings of the 166th Adjourned meeting of the Syndicate held on 31.10.2022***

**Item No. 12:** Amendment of the existing Statute 21.2 of Bangalore University with regard to re-employment of superannuated teachers till the end of the respective semester.

**&**

**Item No. 14:** Fixation of salary to the retired teachers for the re-employment period.

The Registrar said that there is a need to fix any yardstick to continue the services of the teachers after their retirement.

Prof. T.V. Raju informed that the services of teachers who have got orders from the Hon'ble High Court of Karnataka have been continued till the end of the academic year and they were paid the honorarium equivalent to their last month salary for the extended period instead of last pay minus pension. Before continuing the services of

retired teachers, the workload and necessity of their services should be considered. He insisted to take immediate action to vacate the interim orders passed by the High Court in the Writ Petitions filed by AICTE teachers.

Prof. V.V. Suresh Babu suggested that the services of teachers who retire in the middle of the Semester may be continued till the end of the Semester and emoluments equivalent to their last pay minus pension may be sanctioned for the extended period.

Dr. C.R. Mahesh opined that the services of the teachers should be relieved on the last day of their services and they may be re-employed on a remuneration equivalent to highest honorarium payable to full time guest faculty as per UGC guidelines.

***Resolution:***

After discussion, the Syndicate resolved to amend the existing clause 21.2 of Bangalore University Statutes as specified below:

| Existing | Proposed modification |
|---|---|
| **21.2 Age of retirement:** Subject to the terms of any contract entered into under Section 49 of the Act, a person appointed as the permanent teacher of the University shall be entitled to be in the service of the University until he/she completes the age of sixty years. If the age of superannuation is attained in the middle of the academic year, the teacher shall continue till the end of that academic year on re-employment basis subject to condition of such terms as specified by the University regarding physical fitness and payment etc., | **21.2 Age of retirement:** Subject to the terms of any contract entered into under Section **49** of KSU Act 1976 or KSU Act, 2000 a person appointed as the permanent teacher of the University shall be entitled to be in the service of the University until he/she completes the age of **sixty two** years. If the age of superannuation is attained in the middle of the **semester**, the teacher shall continue till the end of that respective **semester only on the pay which shall be the last drawn pay minus pension entitled to by Old pension shceme/New pensions scheme Teachers** subject to condition of such terms as specified by the University regarding physical fitness and **others** etc., |

Further, the Syndicate resolved to fix the honorarium of Rs. 50,000/- per month i.e. maximum honorarium being paid to full-time Guest Faculty as per UGC guidelines for the retired teachers who are being continued on attaining age of superannuation till the end of academic year as per clause 21.2 of Bangalore University Statutes till the approval of the above amendments.

Action shall be initiate to vacate the interim orders passed by the Hon'ble High Court in Writ Petitions filed by Prof. K.B. Raja, Dept. of Electronics and Engineering and Prof. Nagaraj, Department of Civil Engineering, UVCE.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 13:** ವಿಶೇಷ ಚೇತನ ವಿದ್ಯಾರ್ಥಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯ ನೀಡಿರುವುದಕ್ಕೆ ಹಣ ಮುಂಜೂರು ಮಾಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ತರುಣ್ ಕುಮಾರ್, 2ನೇ ವರ್ಷದ ಬಿ.ಟೆಕ್, ವಿಶೇಷ ಚೇತನ ವಿದ್ಯಾರ್ಥಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 15:** 2022-23 ನೇ ಸಾಲಿಗೆ ನಡೆದ ಕ್ರೀಡಾ ಸಲಹಾ ಸಮಿತಿಯ ನಡಾವಳಿಗಳನ್ನು ಅನುಮೋದನೆಗೆ ಮಂಡಿಸುವ ಬಗ್ಗೆ.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಕ್ರೀಡಾ ಸಲಹಾ ಸಮಿತಿಯ ನಡಾವಳಿಗಳಲ್ಲಿ ಹಣಕಾಸು ಬಿಡುಗಡೆ ವಿಷಯಗಳು ಇರುವುದರಿಂದ, ಹಣಕಾಸು ಸಮಿತಿಯ ಅನುಮೋದನೆ ಪಡೆದುಕೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ನಿರ್ಣಯ:**

ಚರ್ಚೆಯ ನಂತರ, 2022-23 ನೇ ಸಾಲಿಗೆ ನಡೆದ ಕ್ರೀಡಾ ಸಲಹಾ ಸಮಿತಿಯ ನಡಾವಳಿಗಳನ್ನು ಅನುಮೋದಿಸಿ ಅಲ್ಪ ಕಾಲಾವಧಿಯ ಟೆಂಡರ್ ಕರೆದು ***Sports Kit, Track Suite,*** ಮುಂತಾದ ಕ್ರೀಡಾ ಪರಿಕರಗಳನ್ನು ಖರೀದಿಸಲು ಹಾಗೂ ಕ್ರೀಡಾ ಕೂಟದಲ್ಲಿ ಭಾಗವಹಿಸುವ ತರಬೇತುದಾರರು, ಅಭ್ಯರ್ಥಿಗಳಿಗೆ ನೀಡುವ ದಿನ ಭತ್ಯೆ/ಪ್ರಯಾಣ ಭತ್ಯೆಗಳನ್ನು ಸಂಬಂಧಿಸಿದವರಿಗೆ, ***RTGS*** ಮೂಲಕ ಪಾವತಿಸಬೇಕೆಂದು ಮತ್ತು ಪ್ರತಿ ಕ್ರೀಡಾ ಕೂಟಕ್ಕೆ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಪಡೆದುಕೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

**Item No. 16:** The Draft Statutes relating to Creation of Teaching and Non-teaching posts for the Ramanagara P.G. Centre of Bangalore University, Bengaluru.

***Resolution**:*

After detailed discussion, the Syndicate resolved to approve the Draft Statutes relating to Creation of Teaching and Non-teaching posts at Ramanagara P.G. Centre, Bangalore University.



**ವಿಷಯ ಸಂಖ್ಯೆ 17:** ದಿನಾಂಕ 26.08.2022 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯ ಅನುಮೋದನೆ ಬಗ್ಗೆ.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯು, ಮ್ಯಾನೇಜ್ಮೆಂಟ್ ವಿಭಾಗದ ಶುಲ್ಕ ವಸೂಲಾತಿಯ ಬಗ್ಗೆ ಮಾಡಿರುವ ಆಕ್ಷೇಪಣೆಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ಬಯಸಿದರು.

ಪ್ರೊ. ಸಿಂಥಿಯಾ ಮೆನೇಜಸ್ ಅವರು ಮಾತನಾಡಿ, 2018-19ನೇ ಸಾಲಿಗೆ ಶುಲ್ಕ ವಸೂಲಾತಿಯನ್ನು ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡದಿರುವ ಸಂಬಂಧ ಲೆಕ್ಕಪರಿಶೋಧಕರ ಆಕ್ಷೇಪಣೆ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲು ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಲಾಗಿದೆ ಎಂದು ತಿಳಿಸಿದರು.

ಡಾ. ಸುಧಾಕರ ಎಚ್ ಅವರು ಮಾತನಾಡಿ, ಹಣಕಾಸು ನಡಾವಳಿಯ ವಿಷಯ ಸಂಖ್ಯೆ 6 ಮತ್ತು 9ರ ಬಗ್ಗೆ ಈಗಾಗಲೇ ಸಿಂಡಿಕೇಟ್ ನಿರ್ಣಯ ತೆಗೆದುಕೊಂಡಿತ್ತು, ಸಿಂಡಿಕೇಟ್ ನಿರ್ಣಯವಾದ ತರುವಾಯ ಕೆಳಹಂತದ ಪ್ರಾಧಿಕಾರವಾದ ಹಣಕಾಸು ಸಮಿತಿಯ ಮುಂದೆ ಮಂಡಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ಇನ್ನು ಮುಂದೆ ಈ ವ್ಯತ್ಯಯ ಆಗದಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಇನ್ನು ಮುಂದೆ ಹಣಕಾಸು ಸಮಿತಿಯ ಮುಂದೆ ವಿಷಯಗಳು ಮಂಡನೆಯಾದ ನಂತರ ಸಿಂಡಿಕೇಟ್ ಮುಂದೆ ಮಂಡಿಸಲು ಕ್ರಮವಹಿಸಲು ಸೂಚಿಸುವುದಾಗಿ ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 26.08.2022 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 18:** ಪರೀಕ್ಷಾ ಮೌಲ್ಯಮಾಪಕರೊಂದಿಗೆ ಡಿಜಿಟಲ್ ಕಾರ್ಯ ನಿರ್ವಹಿಸುವ ಸಹಾಯಕರಿಗೆ ದಿನಗೂಲಿ ಸಂಭಾವನೆ ಹೆಚ್ಚಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಕಸ್ಟೋಡಿಯನ್ ಹಾಗೂ ಡಿಜಿಟಲ್ ಮೌಲ್ಯಮಾಪನ ಕೇಂದ್ರದ ಮೇಲ್ವಿಚಾರಕರು ನೇಮಿಸಿಕೊಳ್ಳುವ ಸಹಾಯಕರ ದಿನಗೂಲಿ ಸಂಭಾವನೆಯನ್ನು ಸೆಪ್ಟೆಂಬರ್/ಅಕ್ಟೋಬರ್ 2022ರ ಪರೀಕ್ಷಾ ಕಾರ್ಯಗಳಿಂದ ಅನ್ವಯವಾಗುವಂತೆ, ದಿನಕ್ಕೆ ರೂ.400/–ರಿಂದ ರೂ.650/–ಕ್ಕೆ ಹೆಚ್ಚಿಸಲು ಸಿಂಡಿಕೇಟ್ ಅನುಮೋದಿಸಿತು.

ಸೆಪ್ಟೆಂಬರ್/ಅಕ್ಟೋಬರ್ 2022ರಲ್ಲಿ ನಡೆದ ವಿವಿಧ ಪದವಿಗಳ 6ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶಗಳನ್ನು ಅತಿ ಶೀಘ್ರವಾಗಿ ಪ್ರಕಟಿಸಿರುವುದಕ್ಕೆ ಕುಲಪತಿಗಳು ಮತ್ತು ಕುಲಸಚಿವರು(ಮೌಲ್ಯಮಾಪನ) ಇವರ ಕಾರ್ಯವನ್ನು ಸಿಂಡಿಕೇಟ್ ಪ್ರಶಂಶಿಸಿತು.

ಮುಂದುವರೆದು, ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಸಂಬಂಧಿಸಿದಂತೆ ಈಗಾಗಲೇ ಹೊರಡಿಸಿರುವ ಶೈಕ್ಷಣಿಕ ವೇಳಾಪಟ್ಟಿಯನ್ನು ಯಾವುದೇ ಕಾರಣಕ್ಕೂ ಮಾರ್ಪಡಿಸಬಾರದೆಂದು ಹಾಗೂ ನಿಗದಿತ ಅವಧಿಯೊಳಗೆ ಪ್ರವೇಶಾತಿಯನ್ನು ಪೂರ್ಣಗೊಳಿಸಲು ಸಿಂಡಿಕೇಟ್ ಸೂಚಿಸಿತು.

*Proceedings of the 166th Adjourned meeting of the Syndicate held on 31.10.2022*

**Item No. 19:** Sanction of financial assistance towards conduct of three days workshop on 'Indian Constitution 2022; Judicial perspectives and Ambedkar Vision.

Sri M. Udayakumar, Dr. C.R. Mahesh and Sri Gopinath suggested to organize the proposed three days workshop on "Indian Constitution 2022: Judicial Perspectives and Ambedkar Vision" as a part of Dr. B.R. Ambedkar Jayanthi Celebrations.

Dr. H. Sudhakar informed that the Syndicate at its meeting held on 17-08-2022 has already approved the budget for organizing the Dr. B.R. Ambedkar Jayanthi Celebration. The above conference is a separate one and he requested to sanction financial support for the said conference.

***Resolution**:*

After detailed discussion, the Syndicate resolved to discuss the above issue at a meeting to be convened under the Chairpersonship of the Vice-Chancellor for organizing Dr. B.R. Ambedkar Jayanthi and to take action accordingly.

**ವಿಷಯ ಸಂಖ್ಯೆ 20:** ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯಗಳಿಗೆ ಗುತ್ತಿಗೆ ಆಧಾರದ ಮೇಲೆ ಕ್ರೋಢೀಕೃತ ವೇತನದಡಿ ಸಹಾಯಕ ಗ್ರಂಥಪಾಲಕರುಗಳನ್ನು ನೇಮಿಸುವ ಬಗ್ಗೆ.

ಡಾ. ಸುಧಾಕರ ಎಚ್ ಅವರು ಮಾತನಾಡಿ, ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡ ಏಳು ಜನ ಸಹಾಯಕ ಗ್ರಂಥಪಾಲಕರುಗಳ ಅವಧಿಯು ದಿನಾಂಕ: 30-07-2022ಕ್ಕೆ ಕೊನೆಗೊಂಡಿದ್ದರೂ ಸಹ, ಸಿಂಡಿಕೇಟ್ ಹಾಗೂ ಆಡಳಿತಾತ್ಮಕ ಆದೇಶವಿಲ್ಲದೆ ಅವರ ಸೇವೆಯನ್ನು ಮುಂದುವರೆಸಿದ್ದಾರೆ. ಈ ಬಗ್ಗೆ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಅವರು ಮುಂದುವರೆದು, ತಾವು ಹಿಂದಿನ ಸಭೆಯಲ್ಲಿ ಡೆಪ್ಯುಟಿ ಲೈಬ್ರರಿಯನ್‌ಗೆ ಸಿ.ಎ.ಎಸ್. ಪ್ರಮೋಷನ್ ನೀಡಿರುವ ಕುರಿತು ಇರುವ ನಿಯಮಾವಳಿಗಳ ಕುರಿತು ಮಾಹಿತಿ ಕೋರಿದ್ದಾಗಿ, ಅದು ಇನ್ನೂ ತಲುಪಿಲ್ಲವೆಂದು ತಿಳಿಸಿದರು.

ಶ್ರೀ ವಿಧೇಯ ಬೆಳಗೋಡೆ ಅವರು ಮಾತನಾಡಿ, ಈಗ ಕಾರ್ಯ ನಿರ್ವಹಿಸುತ್ತಿರುವ ಡಾ. ರಾಧಾಕೃಷ್ಣ ಅವರನ್ನು ಪ್ರಭಾರ ಲೈಬ್ರರಿಯನ್ ಹುದ್ದೆಯಿಂದ ಕೂಡಲೇ ಬಿಡುಗಡೆಗೊಳಿಸಿ, ಬದಲಿ ವ್ಯವಸ್ಥೆ ಮಾಡಬೇಕೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯಗಳಿಗೆ ಗುತ್ತಿಗೆ ಆಧಾರದ ಮೇಲೆ ಕ್ರೋಢೀಕೃತ ವೇತನದಡಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಗ್ರಂಥಪಾಲಕರುಗಳನ್ನು ಒಂದು ದಿನದ ಕಾರ್ಯ ನಿರತ ಬಿಡುವು ನೀಡಿ ಒಂದು ಬಾರಿಯ ಅವಕಾಶದಂತೆ ದಿನಾಂಕ: 02-08-2022ರಿಂದ ಆರು ತಿಂಗಳುಗಳ ಅವಧಿಗೆ ಮಾತ್ರ ಅವರ ಸೇವೆಯನ್ನು ಮುಂದುವರೆಸಬೇಕೆಂದು ಹಾಗೂ ಕೂಡಲೇ ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ ಹೊಸ ನೇಮಕಾತಿ ಪ್ರಕ್ರಿಯೆ ನಡೆಸಿ ಇದರಿಂದ ಮೂರು ತಿಂಗಳ ಒಳಗಾಗಿ ಗುತ್ತಿಗೆ ಆಧಾರದ ಮೇಲೆ, ಸಹಾಯಕ ಗ್ರಂಥಪಾಲಕರುಗಳನ್ನು ನೇಮಿಸಿಕೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.



**Item No. 21:** Providing Road to Shooting Range of Sports Authority of India, Jnana Bharathi Campus, Bangalore.

It was informed that as per the directions of the Department of Higher Education and the Department of Youth Empowerment and Sports, Government of Karnataka, M/S KRIDL was entrusted with the work of forming an approach road to Shooting Range from Sports Authority of India for conduct of Kelo India games

Karnataka 2022 Programme by considering that the Government will re-imburse the cost of the work. M/S KRIDL, BMRCL division has executed the work and now requesting the Bangalore University to sanction Rs.72,47,474.70/- pending re-imbursement from the Government, as the work order was issued from the University Engineering Division. Further it was informed that the Bangalore University has not received the grants from the Government of Karnataka so far. However, the Department of Higher Education vide letter dated: 22-04-2022 innformed the University to complete the said work with the internal resources of the Bangalore University.

***Resolution:***

After detailed discussion, the Syndicate resolved to write to the Government to make payment of Rs.72,47,474.70/- to M/S KRIDL directly as the work was carriedout on the directions of the State Government for conduct of Kelo India University Games - Karnataka 2022 and the work is not at all related to Bangalore University.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 22:** ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿರುವ ಇಬ್ಬರು ಶುಶ್ರೂಷಕಿಯರುಗಳ ಸೇವೆ ಹಾಗೂ ಸಂಭಾವನೆಯ ಕುರಿತು ಹಣಕಾಸು ಸಮಿತಿ ನಿರ್ಣಯಿಸಿರುವ ವಿಷಯದ ಬಗ್ಗೆ.

ಡಾ. ಸುಧಾಕರ ಎಚ್ ಮತ್ತು ಶ್ರೀ ಉದಯ ಕುಮಾರ್ ಎಂ ಅವರುಗಳು ಮಾತನಾಡಿ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿರುವ ಇಬ್ಬರು ಶುಶ್ರೂಷಕಿಯರುಗಳ ಸೇವೆಯನ್ನು ಮುಂದುವರೆಸುವ ಬಗ್ಗೆ ಉನ್ನತ ಪ್ರಾಧಿಕಾರವಾದ ಸಿಂಡಿಕೇಟ್ ಅನುಮೋದನೆ ಪಡೆದುಕೊಂಡ ನಂತರ, ಹಣಕಾಸು ಸಮಿತಿ ಮುಂದೆ ಮಂಡಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಎರಡು ಪಾಳಿಗಳಲ್ಲಿ ಕೆಲಸ ನಿರ್ವಹಿಸುವ ಅವಶ್ಯಕತೆ ಇರುವುದರಿಂದ ಹಾಗೂ ಹಾಸ್ಟೆಲ್ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿರುವುದರಿಂದ, ಸರ್ಕಾರದ ಆರೋಗ್ಯ ಇಲಾಖೆಯಲ್ಲಿ ನೀಡುತ್ತಿರುವ ಸಂಭಾವನೆಯ ದರವನ್ನು ನಿಗದಿಪಡಿಸಿ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಶುಶ್ರೂಷಕಿಯರುಗಳ ಸೇವೆಯನ್ನು ದಿನಾಂಕ: 27–06–2022ರ ಸಿಂಡಿಕೇಟ್ ಸಭೆಯಲ್ಲಿ ನಿಗದಿಪಡಿಸಿದ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 23:** ಬೆಂಗಳೂರಿನ ಜಿಂದಾಲ್ ಮಹಿಳಾ ಕಾಲೇಜಿಗೆ 2022-23 ನೇ ಸಾಲಿನ ಸಂಯೋಜನಾ ನವೀಕರಣ ಶುಲ್ಕ ಮರುಪಾವತಿ ಮತ್ತು ಪಿ.ಜಿ ಡಿಪ್ಲೊಮಾ ಹೆಚ್.ಆರ್.ಎಂ ಕೋರ್ಸಿನ ಸಂಯೋಜನಾ ನವೀಕರಣದ ಬಗ್ಗೆ.

ಡಾ. ಸುಧಾಕರ ಎಚ್, ಅವರು ಮಾತನಾಡಿ, ಹೆಚ್ಚುವರಿ ಶುಲ್ಕಗಳನ್ನು ಮರುಪಾವತಿ ಮಾಡುವ ಬದಲು ಮುಂದಿನ ವರ್ಷದ ಸಂಯೋಜನಾ ಶುಲ್ಕಗಳಿಗೆ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರಿನ ಜಿಂದಾಲ್ ಮಹಿಳಾ ಕಾಲೇಜು ಶಾಶ್ವತ ಸಂಯೋಜನೆ ಹೊಂದಿದ ಕೋರ್ಸುಗಳಿಗೆ ಅನ್ವಯವಾಗುವ ವಾರ್ಷಿಕ ಶುಲ್ಕದ ಬದಲು ಸಂಯೋಜನಾ ನವೀಕರಣ ಶುಲ್ಕವನ್ನು 2022-23 ನೇ ಸಾಲಿಗೆ ಪಾವತಿಸಿರುವ ಕಾರಣ ಸದರಿ ಸಾಲಿಗೆ ಶಾಶ್ವತ ಸಂಯೋಜನೆ ಕೋರ್ಸುಗಳಿಗೆ ಅನ್ವಯವಾಗುವ ವಾರ್ಷಿಕ ಶುಲ್ಕವನ್ನು ಪಡೆದುಕೊಂಡು ಉಳಿದ ಹೆಚ್ಚುವರಿ ಶುಲ್ಕವನ್ನು ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಮೇಲ್ಕಂಡ ಕಾಲೇಜು ಪಾವತಿಸಬೇಕಾದ ಶುಲ್ಕಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 25:** ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣ ಮತ್ತು ಸುಧಾರಣಾ ಸಮಿತಿಯನ್ನು 2022-23 ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ರಚಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣ ಮತ್ತು ಸುಧಾರಣಾ ಸಮಿತಿಯನ್ನು 2022-23 ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಕೆಳಕಂಡಂತೆ ಪುನರ್ ರಚಿಸಲು ಸಿಂಡಿಕೇಟ್ ಅನುಮೋದಿಸಿತು.

| ಕ್ರ.ಸಂ. | ಸದಸ್ಯರುಗಳ ಹೆಸರು | |
|---|---|---|
| 1. | ಕುಲಪತಿಯವರು | ಅಧ್ಯಕ್ಷರು |
| 2. | ಕುಲಸಚಿವರು | ಸದಸ್ಯರು |
| 3. | ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ವಿತ್ತಾಧಿಕಾರಿಯವರು | ಸದಸ್ಯರು |
| 5. | ಶಿಕ್ಷಣಾಧಿಕಾರಿಗಳು<br>ಮುಖ್ಯಕಚೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕಾರ್ಪೋರೇಷನ್ ವೃತ್ತ, ಬೆಂಗಳೂರು | ಸದಸ್ಯರು |
| 6. | ಡಾ. ಸುಧಾಕರ ಎಚ್<br>ಸಿಂಡಿಕೇಟ್ ಸದಸ್ಯರು | ಸದಸ್ಯರು |

| | | |
|---|---|---|
| 7. | ಡಾ. ಸಿ.ಡಿ. ವೆಂಕಟೇಶ್<br>ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು<br>ಮಹಿಳಾ ಅಧ್ಯಯನ ಕೇಂದ್ರ, | ಸದಸ್ಯರು |
| 8. | ಡಾ. ಬಿ.ಎಲ್. ಮುರಳೀಧರ<br>ಪ್ರಾಧ್ಯಾಪಕರು, ಎಂ.ಸಿ.ಎ. ವಿಭಾಗ | ಸದಸ್ಯರು |
| 9. | ಡಾ. ಕೆ.ಎ. ಮಹೇಶ್ವರಯ್ಯ<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 10. | ಶ್ರೀಮತಿ ಕ್ಷಮಾ ಕುಲಕರ್ಣಿ,<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 11. | ಡಾ. ಎಸ್. ರಾಮಕೃಷ್ಣ<br>ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ | ಸದಸ್ಯರು |
| 12. | ಡಾ. ಉಷಾದೇವಿ ಎಂ.ವಿ.<br>ಪ್ರಾಧ್ಯಾಪಕರು, ಇತಿಹಾಸ ವಿಭಾಗ | ಸದಸ್ಯರು |
| 13. | ಡಾ. ಸುರೇಶ್ ವಿ ನಾಡಗೌಡರ್<br>ಪ್ರಾಂಶುಪಾಲರು, ವಿ.ವಿ. ಕಾನೂನು ಕಾಲೇಜು | ಸದಸ್ಯರು |
| 14. | ಡಾ. ಮಲರ್ ಕೋಡಿ,<br>ಪ್ರಾಧ್ಯಾಪಕರು, ಭೂಗರ್ಭಶಾಸ್ತ್ರ ವಿಭಾಗ, | ಸದಸ್ಯರು |
| 15. | ಡಾ. ಕೆ.ಜಿ. ಜಯರಾಮ ನಾಯ್ಕ,<br>ವಿಶೇಷಾಧಿಕಾರಿಗಳು, ಪ.ಜಾ.ಪ.ಪಂ. ವಿಭಾಗ | ಸದಸ್ಯರ ಕಾರ್ಯದರ್ಶಿ |

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 26:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳು ಯು.ಜಿ.ಸಿ /ಇತರೆ ಮೂಲಗಳಿಂದ ಆರ್ಥಿಕ ಸೌಲಭ್ಯಗಳನ್ನು ಪಡೆಯುತ್ತಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದಿಂದ ಲ್ಯಾಪ್‌ಟಾಪ್ ನೀಡುವ ಬಗ್ಗೆ.

ಡಾ. ಸುಧಾಕರ ಎಚ್ ಅವರು ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವ ಕುರಿತು ಪ್ರಗತಿಯ ಬಗ್ಗೆ ಮಾಹಿತಿ ಬಯಸಿದರು.

ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾಲಯದಿಂದ ವಿದ್ಯಾರ್ಥಿ ವೇತನ ನೀಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಲು ಈಗಾಗಲೇ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿ, ಜೆ.ಆರ್.ಎಫ್. ವಿದ್ಯಾರ್ಥಿಗಳಿಗೆ ಇಲ್ಲಿಯವರೆಗೂ ವಿಶ್ವವಿದ್ಯಾಲಯದಿಂದ ಲ್ಯಾಪ್‌ಟಾಪ್ ನೀಡಿರುವುದಿಲ್ಲವೆಂದು ತಿಳಿಸಿದರು.

ಡಾ. ಸಿ.ಆರ್. ಮಹೇಶ್ ಅವರು ಮಾತನಾಡಿ, ಜೆ.ಆರ್.ಎಫ್. ವಿದ್ಯಾರ್ಥಿಗಳು ಯು.ಜಿ.ಸಿ.ಯಿಂದ ಸಾದಿಲ್ವಾರು ಮೊತ್ತವನ್ನು ಪಡೆಯುತ್ತಿದ್ದಾರೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಯು.ಜಿ.ಸಿ.ಯಿಂದ ಜೆ.ಆರ್.ಎಫ್. ಶಿಷ್ಯವೇತನ ಹಾಗೂ ಇತರೇ ಸಂಸ್ಥೆಗಳಿಂದ ಸಹಾಯಧನ ಪಡೆಯುತ್ತಿರುವ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ವತಿಯಿಂದ ಉಚಿತವಾಗಿ ಲ್ಯಾಪ್‌ಟಾಪ್ ನೀಡುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಅನುಮೋದನೆ ಪಡೆದುಕೊಂಡು ನಂತರ ಕ್ರಮ ತೆಗೆದುಕೊಳ್ಳಬೇಕೆಂದು ಸಿಂಡಿಕೇಟ್ ಅನುಮೋದಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 29:** 2022–23ನೇ ಸಾಲಿಗೆ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ಪರಿಷ್ಕರಣೆಯ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, 2022–23ನೇ ಸಾಲಿಗೆ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರವೇಶ/ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಿಸಲು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 29(2) (g)ರ ಅಡಿಯಲ್ಲಿ ಪರಿಗಣಿಸಿ ಸಿಂಡಿಕೇಟ್ ಅನುಮೋದಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 30:** ಡಾ. ಎ.ಎಸ್. ರಾಯಮಾನೆ ರವರ ಪಿಂಚಣಿ ಮತ್ತು ಉಪಲಬ್ಧಗಳ ಮೊತ್ತ ರೂ. 12.20 ಲಕ್ಷಗಳು ಬಿಡುಗಡೆಯ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ಡಾ. ಎ.ಎಸ್. ರಾಯಮಾನೆ ರವರ ಪಿಂಚಣಿ ಮತ್ತು ಉಪಲಬ್ಧಗಳಲ್ಲಿ ಕಡಿತಗೊಳಿಸಿದ್ದ ಮೊತ್ತವಾದ ರೂ.12.20 ಲಕ್ಷಗಳನ್ನು ಯು.ಜಿ.ಸಿ. ಪತ್ರದ ನಂತರ ಅವರಿಗೆ ಪಾವತಿ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 31:** ವಿಶ್ವವಿದ್ಯಾಲಯವು ವಿವಿಧ ಬ್ಯಾಂಕ್‌ನಲ್ಲಿ ತೊಡಗಿಸಲಾಗಿರುವ ನಿಶ್ಚಿತ ಠೇವಣಿಯನ್ನು ಹೆಚ್ಚಿನ ಬಡ್ಡಿ ದರ ನೀಡುವ ಬ್ಯಾಂಕ್‌ಗಳಿಗೆ ಬದಲಾವಣೆ ಮಾಡುವ ಬಗ್ಗೆ.

ಆಹ್ವಾನಿತರಾಗಿ ಸಭೆಯಲ್ಲಿ ಭಾಗವಹಿಸಿದ್ದ ವಿತ್ತಾಧಿಕಾರಿಯವರು ಮಾತನಾಡಿ, ಪ್ರಸ್ತುತ ಬ್ಯಾಂಕ್‌ಗಳಲ್ಲಿ ಇಟ್ಟಿರುವ ನಿಶ್ಚಿತ ಠೇವಣಿಯ ಮೇಲೆ ಬಡ್ಡಿ ದರಗಳು ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವ ಬಡ್ಡಿ ದರಗಳ ಪ್ರಮಾಣಕ್ಕಿಂತ ಕಡಿಮೆ ಇರುವುದರಿಂದ, ನಿಶ್ಚಿತ ಠೇವಣಿಯನ್ನು ಹಿಂಪಡೆಯಲು ಹಾಗೂ ಅವಧಿ ಮುಕ್ತಾಯವಾಗುವ ನಿಶ್ಚಿತ ಠೇವಣಿಗಳನ್ನು ಒಂದು ಸಮಿತಿಯ ವರದಿ ಪಡೆದುಕೊಂಡು ಹೆಚ್ಚುವರಿ ಬಡ್ಡಿ ನೀಡುವ

ಬ್ಯಾಂಕ್‌ಗಳಲ್ಲಿ ತೊಡಗಿಸುವ ಅವಶ್ಯಕತೆ ಇದೆ ಹಾಗೂ ಶೇ60ರಷ್ಟು ನಿಶ್ಚಿತ ಠೇವಣಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮತ್ತು ಉಳಿದ ಶೇ40ರಷ್ಟು ನಿಶ್ಚಿತ ಠೇವಣಿಯನ್ನು ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್‌ಗಳಲ್ಲಿ ತೊಡಗಿಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ನಿಶ್ಚಿತ ಠೇವಣಿಗಳನ್ನು ಟೆಂಡರ್ ಪ್ರಕ್ರಿಯೆ ಮೂಲಕ ಹೆಚ್ಚುವರಿ ಬಡ್ಡಿ ನೀಡುವ ಬ್ಯಾಂಕ್‌ಗಳಲ್ಲಿ ತೊಡಗಿಸಲನುವಾಗಲು ಕೆಳಕಂಡಂತೆ ನಿಶ್ಚಿತ ಠೇವಣಿ ಹೂಡಿಕೆ ಹಾಗೂ ನಿರ್ವಹಣಾ ಸಮಿತಿಯನ್ನು ರಚಿಸಲು ಸಿಂಡಿಕೇಟ್ ಅನುಮೋದಿಸಿತು.

| | | |
|---|---|---|
| 1. | ಕುಲಪತಿಯವರು | ಅಧ್ಯಕ್ಷರು |
| 2. | ಕುಲಸಚಿವರು | ಸದಸ್ಯರು |
| 3. | ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಪ್ರೊ. ಸಿಂಥಿಯಾ ಮೆನೇಜಸ್ | ಸದಸ್ಯರು |
| 5. | ಶ್ರೀ ಉದಯಕುಮಾರ್ ಎಂ | ಸದಸ್ಯರು |
| 6. | ಶ್ರೀ ಗೋಪಿನಾಥ್ | ಸದಸ್ಯರು |
| 7. | ವಿತ್ತಾಧಿಕಾರಿಯವರು | ಸದಸ್ಯ ಕಾರ್ಯದರ್ಶಿ |

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 32:** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಈಶಾನ್ಯ ರಾಜ್ಯಗಳ ಮಹಿಳಾ ವಿದ್ಯಾರ್ಥಿನಿಯರಿಗೋಸ್ಕರ ನಿರ್ಮಾಣಗೊಂಡಿರುವ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಈಶಾನ್ಯ ರಾಜ್ಯಗಳ ಮಹಿಳಾ ವಿದ್ಯಾರ್ಥಿನಿಯರಿಗೋಸ್ಕರ ನಿರ್ಮಾಣಗೊಂಡಿರುವ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಸಂಬಂಧಪಟ್ಟ ಮಾರ್ಗಸೂಚಿಯನ್ನು ಸಿಂಡಿಕೇಟ್ ಅನುಮೋದಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 33:** ಪ್ರಸಾರಾಂಗ ಸಲಹಾ ಸಮಿತಿಯನ್ನು ಪುನರ್ ರಚನೆ ಮಾಡುವ ಬಗ್ಗೆ.

ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ವಿಶ್ವವಿದ್ಯಾಲಯದ ಮುದ್ರಣಾಲಯದ ವತಿಯಿಂದ ವಿಶ್ವವಿದ್ಯಾಲಯದ ಗೆಜೆಟ್ ಅನ್ನು ಮುದ್ರಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

4/11/22

**ನಿರ್ಣಯ:**

ಚರ್ಚೆಯ ನಂತರ, ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವಂತೆ ಪ್ರಸಾರಾಂಗ ಸಲಹಾ ಸಮಿತಿಯನ್ನು ಪುನರ್ ರಚನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು, ವಿಶ್ವವಿದ್ಯಾಲಯದ ಗೆಜೆಟ್ ಅನ್ನು ಪ್ರಸಾರಾಂಗ ಮತ್ತು ಮುದ್ರಣಾಲಯದ ವತಿಯಿಂದ ಮುದ್ರಿಸಲು ಸಿಂಡಿಕೇಟ್ ಸೂಚಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 34:** 2021–22 ನೇ ಸಾಲಿನ ಹಿಂದುಳಿದ ವರ್ಗಗಳ ಕೆಲವು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರಾಗದಿರುವ ಬಗ್ಗೆ.

ಕುಲಪತಿಗಳು ಮಾತನಾಡಿ, ಹಿಂದುಳಿದ ವರ್ಗಗಳ ಕೆಲವು ವಿದ್ಯಾರ್ಥಿಗಳಿಗೆ ಶುಲ್ಕ ಮರುಭರಣ ಆಗದಿರುವ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಮಾಹಿತಿ ನೀಡಿ ಮರುಭರಣೆ ಮಾಡುವ ಅವಶ್ಯಕತೆಯ ಬಗ್ಗೆ ಮನದಟ್ಟು ಮಾಡಿಕೊಡಲಾಗಿದೆ. ಸದರಿ ವಿದ್ಯಾರ್ಥಿಗಳ ಶುಲ್ಕವನ್ನು ಮರುಪಾವತಿ ಮಾಡಲು ಸರ್ಕಾರ ಒಪ್ಪಿಕೊಂಡಿದೆ. ಆದಷ್ಟುಬೇಗ ಮರುಪಾವತಿ ಮಾಡಲು ಸರ್ಕಾರಕ್ಕೆ ಮತ್ತೊಮ್ಮೆ ಪತ್ರ ಬರೆದು ಜ್ಞಾಪಿಸಲಾಗುವುದು ಎಂದು ತಿಳಿಸಿದರು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 35:** ಬೆಂಗಳೂರು ವಿಶ್ವವಿದ್ಯಾಲಯದ ಯು.ವಿ.ಸಿ.ಇಯಲ್ಲಿ Annual Inter Collegiate Techno Managerial fest Inspiron-2022 and Annual Inter Collegiate cultural festival Milagro-2022 ಕಾರ್ಯಕ್ರಮಕ್ಕೆ ಹಣ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 36:** ಬೆಂಗಳೂರು ವಿಶ್ವವಿದ್ಯಾಲಯದ ಗಣಕಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ. ಹನುಮಂತಪ್ಪ, ಇವರನ್ನು ತಾತ್ಕಾಲಿಕವಾಗಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಕುಲಸಚಿವರು (ಆಡಳಿತ) ಹುದ್ದೆಗೆ ನೇಮಕ ಮಾಡಲಾಗಿ, ಸರ್ಕಾರದ ಆದೇಶದ ಮೇರೆಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿಡುಗಡೆ ಮಾಡಿರುವ ವಿಷಯವನ್ನು ಸಿಂಡಿಕೇಟ್ ಸಭೆ ಅನುಸಮರ್ಥನೆಯ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಗಣಕಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ. ಹನುಮಂತಪ್ಪ, ಇವರನ್ನು ತಾತ್ಕಾಲಿಕವಾಗಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಕುಲಸಚಿವರು (ಆಡಳಿತ) ಹುದ್ದೆಗೆ ನೇಮಕ ಮಾಡಲಾಗಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 232 ಯುಆರ್‌ಸಿ 2022 ದಿನಾಂಕ:

22-08-2022ರಂತೆ ನಿಯೋಜನೆ ಮೇರೆಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿಡುಗಡೆ ಮಾಡಿರುವ ವಿಷಯವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 37:** ಕ್ರಿಮಿನಲ್ ಪ್ರಕರಣದಲ್ಲಿ ಅಪರಾಧ ನಿರ್ಣೀತರಾಗಿರುವ ಡಾ. ಜಿ. ನರೇಂದ್ರಕುಮಾರ್ ನಿವೃತ್ತ ಪ್ರಾಧ್ಯಾಪಕರು ಹಾಗೂ ಇವರ ವಿರುದ್ಧ ಕ್ರಮಜರುಗಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಕ್ರಿಮಿನಲ್ ಪ್ರಕರಣದಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಡಾ. ಜಿ. ನರೇಂದ್ರಕುಮಾರ್ ಅವರಿಗೆ ಅಡಿಷನಲ್ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಅಪರಾಧ ನಿರ್ಣೀತಗೊಳಿಸಿ ಹಾಗೂ ರೂ.5,000/-ದಂಡ ಹಾಗೂ 6 ತಿಂಗಳ ಸರಳ ಕಾರಾಗೃಹವನ್ನು ವಿಧಿಸಿ ದಿನಾಂಕ: 16-11-2016ರಲ್ಲಿ ತೀರ್ಪು ನೀಡಿರುವುದನ್ನು ಅವರ ಮೇಲ್ಮನವಿ ಇತ್ಯರ್ಥವಾಗುವವರೆಗೆ 214(ಬಿ)(2)ರಡಿಯಲ್ಲಿ ಕ್ರಮ ಜರುಗಿಸುವ ಬಗ್ಗೆ ಕಾನೂನು ಅಭಿಪ್ರಾಯ ಪಡೆದು ಸಮಿತಿ ರಚನೆ ಮಾಡಲು ಸಿಂಡಿಕೇಟ್ ನಿರ್ಣಯಿಸಿ ಕುಲಪತಿಗಳಿಗೆ ಅಧೀಕರಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 38:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಜ್ಞಾನಭಾರತಿ ಆವರಣದಲ್ಲಿ ವಿವಿಧ ವಿದ್ಯಾಸಂಸ್ಥೆಗಳಿಗೆ ಲೀಸ್ ಆಧಾರದ ಮೇಲೆ ನೀಡಲಾಗಿರುವ ಬಾಡಿಗೆಯನ್ನು ಪರಿಷ್ಕರಿಸುವ ಬಗ್ಗೆ.

ಮತ್ತು

**ವಿಷಯ ಸಂಖ್ಯೆ 53:** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಬೇರೆ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಿರುವ ಜಮೀನಿನ ವಾರ್ಷಿಕ ಗುತ್ತಿಗೆ ದರವನ್ನು ಪರಿಷ್ಕರಿಸುವ ಬಗ್ಗೆ.

ವಿಷಯ ಸಂಖ್ಯೆ: 38 ಮತ್ತು 53ನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

ಕುಲಸಚಿವರು ಮಾತನಾಡಿ, ಇತ್ತೀಚೆಗೆ ಕರ್ನಾಟಕ ಸರ್ಕಾರವು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಜ್ಞಾನಭಾರತಿ ಆವರಣದಲ್ಲಿರುವ ಜಮೀನನ್ನು ಗುಲ್ಬರ್ಗಾ ಕೇಂದ್ರೀಯ ವಿಶ್ವವಿದ್ಯಾಲಯ ಹಾಗೂ ಇತರ ಸರ್ಕಾರಿ ಸಂಸ್ಥೆಗಳಿಗೆ ಲೀಸ್ ಆಧಾರದ ಮೇಲೆ ಮಂಜೂರು ಮಾಡುವ ಸಂದರ್ಭದಲ್ಲಿ ಎಕರೆಗೆ ವಾರ್ಷಿಕವಾಗಿ ರೂ.50,000/- ಭೋಗ್ಯದ ಮೊತ್ತವನ್ನು ನಿಗದಿಪಡಿಸಿದೆ. ಆದ್ದರಿಂದ ಸದರಿ ಸರ್ಕಾರದ ಆದೇಶವನ್ನು ಮಾನದಂಡವಾಗಿ ಪರಿಗಣಿಸಿ, ವಿಶ್ವವಿದ್ಯಾಲಯದಿಂದ ಇತರ ಸಂಸ್ಥೆಗಳಿಗೆ ಬೋಗ್ಯದ ಆಧಾರದ ಮೇಲೆ ನೀಡಿರುವ

ಜಮೀನಿನ ವಾರ್ಷಿಕ ಗುತ್ತಿಗೆ ಮೊತ್ತವನ್ನು ಎಕರೆಗೆ ರೂ.50,000/- ಎಂದು ನಿಗದಿಪಡಿಸಲು ಹಾಗೂ ಪ್ರತಿ ವರ್ಷ ಶೇ10ರಷ್ಟು ಹೆಚ್ಚಿಸಬಹುದಾಗಿದೆ ಎಂದು ತಿಳಿಸಿದರು. ಅವರು ಮುಂದುವರೆದು, ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಕೆಲ ಭಾಗಗಳಲ್ಲಿ ವಿಶ್ವವಿದ್ಯಾಲಯದ ಜಮೀನು ಒತ್ತುವರಿಯಾಗಿದ್ದು ಒತ್ತುವರಿ ಕುರಿತು ನ್ಯಾಯಾಲಯಗಳ ಪ್ರಕರಣಗಳಲ್ಲಿ ವಕೀಲರನ್ನು ನೇಮಿಸಿಕೊಳ್ಳುವ ಅವಶ್ಯಕತೆ ಇದೆ ಹಾಗೂ ಬಾಕಿ ಇರುವ ಕಾಂಪೌಂಡ್ ಗೋಡೆಗಳನ್ನು ಪೂರ್ಣಗೊಳಿಸಲು ಹಾಗೂ ಜಮೀನಿನ ಬೌಂಡರಿಯ ಜಿಯೋಕೋಡಿಂಗ್ ಮಾಡಿಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಜ್ಞಾನಭಾರತಿ ಆವರಣದಲ್ಲಿ ವಿವಿಧ ವಿದ್ಯಾಸಂಸ್ಥೆಗಳಿಗೆ ಲೀಸ್ ಆಧಾರದ ಮೇಲೆ ನೀಡಲಾಗಿರುವ ಜಮೀನಿಗೆ ವಾರ್ಷಿಕ ಗುತ್ತಿಗೆ ಮೊತ್ತವನ್ನು ಎಕರೆಗೆ ಕನಿಷ್ಠ ರೂ.50,000/- ಎಂದು ನಿಗದಿಪಡಿಸಿ ಪರಿಷ್ಕೃತ ಮೊತ್ತವನ್ನು 2022-23ನೇ ಸಾಲಿನಿಂದ ಜಾರಿಗೆ ತರಲು ಹಾಗೂ ಈ ಮೊತ್ತವನ್ನು ಪ್ರತಿ ವರ್ಷ ಶೇ10ರಷ್ಟು ಹೆಚ್ಚಿಸಲು ಸಿಂಡಿಕೇಟ್ ನಿರ್ಣಯಿಸಿತು.

ಮುಂದುವರೆದು, ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಜಮೀನಿನ ಬೌಂಡರಿಯನ್ನು ಜಿಯೋಕೋಡಿಂಗ್ ಮಾಡಿಸಬೇಕೆಂದು ಹಾಗೂ ಬಾಕಿ ಇರುವ ಕಾಂಪೌಂಡ್ ಗೋಡೆಯನ್ನು ಪೂರ್ಣಗೊಳಿಸಲು ಸೂಚಿಸಿ, ವಿಶ್ವವಿದ್ಯಾಲಯದ ಜಮೀನು ಒತ್ತುವರಿಯನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತಿಳಿಸಿ ಹಾಗೂ ಈ ಕುರಿತು ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯದ ಪರವಾಗಿ ವಾದ ಮಂಡಿಸಲು ನುರಿತ ನ್ಯಾಯವಾದಿಗಳನ್ನು ನೇಮಿಸಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 39:** ಶ್ರೀ ಮಲ್ಲಾರಾಧ್ಯ ಎಸ್, ಅಧೀಕ್ಷಕರು, ಹಣಕಾಸು ವಿಭಾಗ, ಬೆಂ.ವಿ.ಬೆಂ ಇವರ ಪತ್ನಿಯ ವೈದ್ಯಕೀಯ ವೆಚ್ಚವನ್ನು ಮತ್ತೊಮ್ಮೆ ಪರಿಶೀಲಿಸಿ ಬಾಕಿ ಉಳಿದಿರುವ ಮೊತ್ತ ಮರುಪಾವತಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಮಲ್ಲಾರಾಧ್ಯ ಎಸ್, ಅಧೀಕ್ಷಕರು, ಹಣಕಾಸು ವಿಭಾಗ, ಬೆಂ.ವಿ.ಬೆಂ ಇವರ ಪತ್ನಿಯ ವೈದ್ಯಕೀಯ ವೆಚ್ಚದಲ್ಲಿ ಮರುಪಾವತಿಗೆ ಶಿಫಾರಸ್ಸು ಮಾಡಲಾದ ರೂ.6,71,415/-ಗಳಲ್ಲಿ ಈಗಾಗಲೇ ಇನ್ಸುರೆನ್ಸ್ ಕಂಪನಿ ರೂ.3,00,000/-ಗಳನ್ನು ಪಾವತಿಸಿರುವುದರಿಂದ ಬಾಕಿ ಮೊತ್ತವನ್ನು ವಿಶ್ವವಿದ್ಯಾಲಯದಿಂದ ಮರುಭರಣೆ ಮಾಡಲು ಅನುಮೋದಿಸಿ, ಶ್ರೀಯುತರು ಈಗಾಗಲೇ ರೂ.3,68,000/-ಗಳನ್ನು ಸದರಿ ವೈದ್ಯಕೀಯ ವೆಚ್ಚವಾಗಿ ಮುಂಗಡ ಪಡೆದಿರುವುದರಿಂದ ಸದರಿ ಮೊತ್ತವನ್ನು ಹೊಂದಾಣಿಕೆ ಮಾಡಿಕೊಂಡು, ಬಾಕಿ ಮೊತ್ತ ರೂ.3,415/-ಗಳನ್ನು ಮರುಪಾವತಿ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 40:** 2021–22ನೇ ಸಾಲಿಗೆ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸದಂತಹ ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 2021–22ನೇ ಸಾಲಿಗೆ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸದಂತಹ ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸಲು ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 63ರ ಉಪ ಪ್ರಕರಣ (7)ರ ಅಡಿಯಲ್ಲಿ ಸರ್ವಾನುಮತದಿಂದ ಸಿಂಡಿಕೇಟ್ ನಿರ್ಣಯಿಸಿತು.

| Sl. No. | College |
|---|---|
| 1 | Lorven Educational Centre, 84, 1 Chandapur, Anekal Taluk, Bangalore Dist.-68 |
| 2 | Innovative Degree College, No.191/2, Ballur Village, Attibele Hobli, Anekal Taluk, Bangalore Urban Dist |
| 3 | Lorven St. Xavier College, 84, 1 Chandapur, Anekal Taluk, Bengaluru Dist.-68 |
| 4 | Innovative Film Academy, No.24&26, KIADB Indistrial Area, Bidadi-562 109, |
| 5 | Western International College, No.22/1 Siddehalli Village, Nagasandra Post, Hessargatta Main Road, Bangalore-560 073 |
| 6 | Srishti Evening Degree College, No.784, Ring Road, 7th Blcok, 2nd Phase, Banashankari 3rd Stage, Bengaluru-85 , Mob:9986517160 |
| 7 | MGP Aviation Academy, Kanminaki, No.41/P2, Hejjala, Mysuru Road, Bangalore-560074 |

ಮುಂದುವರೆದು, ಕೆಳಕಂಡ ಕಾಲೇಜುಗಳು ಸಂಯೋಜನೆಯನ್ನು ಮುಂದುವರೆಸಲು ಕೋರಿರುವುದರಿಂದ ವಸ್ತು ಸ್ಥಿತಿಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಬೇಕೆಂದು ನಿರ್ಣಯಿಸಿ ಸಮಿತಿಯನ್ನು ರಚಿಸಲು ಕುಲಪತಿಗಳಿಗೆ ಅಧಿಕರಿಸಿತು.

| | |
|---|---|
| 1 | Nightingales Degree College, 1/B & C, 3rd Main, BTM 4th Stage, 1st Block, Bengaluru-560 076 |
| 2 | Oxbridge College of Science & Commerce, No.8 & 9 Mahadeshwaranagar, Vishvaneedum Post, Herohalli Cross, Bangalore -91 |

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 41:** 2022–23ನೇ ಸಾಲಿನಿಂದ ಬನ್ನೇರುಘಟ್ಟ ರಸ್ತೆಯ ದಿ ಕಿಂಗ್‌ಡಮ್ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 2022–23ನೇ ಸಾಲಿನಿಂದ ಬನ್ನೇರುಘಟ್ಟ ರಸ್ತೆಯ ದಿ ಕಿಂಗ್‌ಡಮ್ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲು ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 63ರ ಉಪ ಪ್ರಕರಣ (7)ರ ಅಡಿಯಲ್ಲಿ ಸರ್ವಾನುಮತದಿಂದ ಸಿಂಡಿಕೇಟ್ ನಿರ್ಣಯಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 42:** ಬೆಂಗಳೂರು ವಿಶ್ವವಿದ್ಯಾಲಯದ ಬೋಧಕೇತರ ತಾಂತ್ರಿಕ ಹುದ್ದೆಯಾದ ಕಂಪ್ಯೂಟರ್ ವೃಂದದ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಗಳನ್ನು ದಿನಾಂಕ 26.08.2022 ರ ಹಣಕಾಸು ಸಮಿತಿ ಸಭೆಯ ನಿರ್ಣಯದಂತೆ ಮಾರ್ಪಡಿಸಿರುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 26.08.2022 ರ ಹಣಕಾಸು ಸಮಿತಿಯ ಶಿಫಾರಸ್ಸಿನಂತೆ ಬೆಂಗಳೂರು ವಿಶ್ವವಿದ್ಯಾಲಯದ ಬೋಧಕೇತರ ತಾಂತ್ರಿಕ ಹುದ್ದೆಗಳಾದ ಕಂಪ್ಯೂಟರ್ ವೃಂದದ ವೃಂದ ಮತ್ತು ನೇಮಕಾತಿಗೆ ಸಂಬಂಧಿಸಿದ ಪರಿಷ್ಕರಿಸಿದ ಕರಡು ಪರಿನಿಯಮಾವಳಿಗಳನ್ನು ಸಿಂಡಿಕೇಟ್ ಅನುಮೋದಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 43:** 2022–23ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಹಾಗೂ 2023–24ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ತಯಾರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 2022–23ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಹಾಗೂ 2023–24ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ವಿತ್ತಾಧಿಕಾರಿಗಳ ಸಹಯೋಗದೊಂದಿಗೆ ತಯಾರಿಸಲು ಕುಲಪತಿಗಳಿಗೆ ಸಿಂಡಿಕೇಟ್ ಅಧಿಕರಿಸಿತು.

*Proceedings of the 166th Adjourned meeting of the Syndicate held on 31.10.2022*

**Item No. 44:** Lowest tender approval for Construction of Mechanical Engineering Block at UVCE, K.R Circle, Bangalore University, Bengaluru.

It was informed to the Syndicate that the original estimate for construction of Mechanical Engineering Block at UVCE was Rs.19.00 crores, initially. Later it was revised to Rs.55.00 Crores as per the estimate submitted by PRAMC which was approved in the 58th Works Committee held on 18-08-2020 and 153rd meeting of the Syndicate on 20-08-2020. Subsequently, the estimate was revised to Rs.85.00 Crores and the same was approved by the Government of Karnataka vide order dated: 22-12-2021. The construction work of the said project was entrusted to construction unit of Health and Family Welfare Department, Government of Karnataka vide Government order dated: 01-01-2022. Further, it was informed that the Syndicate at its special meeting held on 13-09-2022 has approved for release of Rs.29.00 crores as contribution from the Bangalore University, based on the

recommendation of the Finance Committee. It was noted that the Syndicate and the Finance Committee have made the resolution that the remaining amount shall be met out from the internal resources of UVCE in the coming years assuming that the UVCE will continue to be part of the Bangalore University. Now, the Health and Family Welfare Department has informed that the Tender was finalized for construction of Mechanical block and requested the University to approve the lowest Tender which is 9.45% above the S.R. Rate. The Department also stated that the cost of the project will be Rs.9450.27 Lakhs which may reach up to Rs.100.00 Crores on completion. As per the Government order, the Tender premium shall not be more than 5% of the S.R. rate.

Mr. Udaya Kumar M said that the Syndicate has already taken a decision to release Rs.29.00 Crores with a condition that the remaining expenditure shall be borne out of the internal resources of the UVCE as the University cannot afford to bear the total cost, in view of the fact that the UVCE will become autonomous institute. Even the original proposal was also with a condition that the first instalment shall be released from the Bangalore University and remaining expenditure shall be met out from the resources received from the UVCE in the subsequent years. Therefore, the University should stick on to its stand and to see that the remaining portion of the expenditure should be paid the UVCE/Government. He further stated that the tender approval committee should negotiate as the tender premium is more than 5%. He insisted to defer the matter to the next Syndicate, in view of the above facts.

Dr. C.R. Mahesh urged to stick on to the University stand and to intimate the Government to meet the remaining additional expenditure either from the Government or from the internal resources of the UVCE University, as the alumni of the UVCE were eager to fund the development works of the UVCE.

Dr. Sudhakara H opined that the reasons quoted by the Tenderer are not acceptable. The construction place is situtated inside the campus and away from the main road and the work can be executed at day time. He informed that the then Vice-Chancellor wrote to the Government by stating that the cost of the project will be met out from the internal resources without the approval of the Syndicate. The actual facts were not taken into consideration while submitting the above letter to the Government. He further stated that the remaining cost of the project shall be met

out from the internal resource of the UVCE University. The University has already released the amount of Rs.29.00 cores as per its commitment.

The Finance Officer, suggested that the University may request the Government to make a budgetary provision for construction of UVCE Mechanical Block as the Government is contemplated to create a separate budget head for UVCE University for the Financial Year 2023-24.

Prof. V.V. Suresh Babu suggested to collect the portion of the fee collected by the UVCE from KEA for the current academic year towards I year admission, as the University is going to incur the expenditure for the guest faculty and other activities.

***Resolution:***

After detailed discussions, the Syndicate resolved to refer the revised tender premium proposal to the Government of Karnataka for approval as the Government itself has approved the estimate of the above project initially. The Syndicate further resolved to request the Government to bear the remaining portion of the cost of the project from the internal resources of UVCE University. Before sending the proposal to the Government, the matter be placed before the Committee for acceptance of lowest Tender of Bangalore University.



**Item No. 45:** Construction of Post Graduate Centre at Ramanagar Bangalore University.

The Finance Officer suggested to negotiate with the Tenderer, though the Tender premium is 4.16% which is higer than permissible S.R. rate.

***Resolution:***

After detailed discussion, the Syndicate resolved to approve the Tender for the construction of new building for the Post Graduate Centre at Ramanagar Bangalore University at a cost of Rs.42.39 Crores, 4.16% above the S.R. Rate.

The Syndicate further resolved that the approval for the lowest tender and excess amount of the project cost shall be issued after negotiation by the Committee for acceptance of lowest Tender of Bangalore University.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 46:** ಶ್ರೀ ರಾಮಾಂಜಿನಪ್ಪ ಜಿ, ಇತಿಹಾಸ ವಿಭಾಗದ ಸಂಶೋಧನಾ ವಿದ್ಯಾರ್ಥಿಯ ವೈದ್ಯಕೀಯ ವೆಚ್ಚ ಭರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ರಾಮಾಂಜಿನಪ್ಪ ಜಿ, ಇತಿಹಾಸ ವಿಭಾಗದ ಸಂಶೋಧನಾ ವಿದ್ಯಾರ್ಥಿಯು ಜ್ಞಾನಭಾರತಿ ಆವರಣದಲ್ಲಿ ರಸ್ತೆ ಅಪಘಾತಕ್ಕೊಳಗಾಗಿರುವುದರಿಂದ ಹಾಗೂ ಆ ಸಂದರ್ಭದಲ್ಲಿ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಸ್ಥಳಾವಕಾಶ ಸೌಲಭ್ಯ ದೊರಕದ ಕಾರಣ, ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಸ್ಥಳಾವಕಾಶ ದೊರಕುವವರಿಗೆ, ಅಭಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ವೈದ್ಯಕೀಯ ವೆಚ್ಚ ರೂ.2,79,860/-(ಎರಡು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ಎಂಟು ನೂರ ಅರವತ್ತು) ಮೊತ್ತವನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ವಿಶ್ವವಿದ್ಯಾಲಯದಿಂದ ಭರಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 47:** 2022-23 ನೇ ಸಾಲಿನಿಂದ ಬೆಂಗಳೂರಿನ ಅಪೂರ್ವ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಾಲೇಜಿನ ಎಂ.ಕಾಂ ಕೋರ್ಸಿನ ಸಂಯೋಜನೆಯನ್ನು ನವೀಕರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 2022-23 ನೇ ಸಾಲಿನಿಂದ ಬೆಂಗಳೂರಿನ ಅಪೂರ್ವ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಾಲೇಜಿನ ಎಂ.ಕಾಂ. ಕೋರ್ಸಿನ ಸಂಯೋಜನಾ ನವೀಕರಣದ ವಿಷಯದಲ್ಲಿ ಸ್ಥಳೀಯ ವಿಚಾರಣಾ ಸಮಿತಿಯ ಷರತ್ತುಗಳ ಅನುಪಾಲನೆಯ ಬಗ್ಗೆ ಪರಿಶೀಲನೆಯನ್ನು ನಡೆಸಿ ಪ್ರೊ. ಸುರೇಶ್ ವಿ ನಾಡಗೌಡರ್ ಇವರ ಅಧ್ಯಕ್ಷತೆಯಲ್ಲಿ ಸಲ್ಲಿಸಲಾದ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸನ್ನು ಪರಿಗಣಿಸಿ ಅನುಮೋದಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 48:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ /ಕಛೇರಿಗಳಲ್ಲಿ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ಮುಂದುವರೆಸುವ ಬಗ್ಗೆ.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಪ್ರತಿ ಹೊರಗುತ್ತಿಗೆ ನೌಕರರ ಕಾರ್ಯಭಾರವನ್ನು ಪರಿಶೀಲಿಸಿ ಅವರ ಕೆಲಸ ನಿರ್ವಹಣೆ ಬಗ್ಗೆ ಮಾಹಿತಿ ಪಡೆದುಕೊಂಡು ನಂತರ ಹೊರಗುತ್ತಿಗೆ ನೌಕರರ ಸೇವೆಯನ್ನು ಮುಂದುವರೆಸುವುದು ಒಳಿತೆಂದು ಅಭಿಪ್ರಾಯಪಟ್ಟರು.

ಕುಲಸಚಿವರು ಮಾತನಾಡಿ, ಈಗಾಗಲೇ ಹೊರಗುತ್ತಿಗೆ ನೌಕರರ ಸೇವಾವಧಿಯು ದಿನಾಂಕ: 15-10-2022ಕ್ಕೆ ಕೊನೆಗೊಂಡಿರುವುದರಿಂದ ಪ್ರತಿ ಹೊರಗುತ್ತಿಗೆ ನೌಕರರ ಕಾರ್ಯಭಾರ ಪರಿಶೀಲನೆಗೆ ಸಮಯ

ಬೇಕಾಗುತ್ತದೆ. ಆದಕಾರಣ, ಪ್ರಸ್ತುತ ಮುಂದುವರೆಸಿ, ಮುಂದಿನ ಅವಧಿಯೊಳಗೆ ಸದಸ್ಯರ ಸಲಹೆಯಂತೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಮುಂದಿನ ಬಾರಿ ಹೊರಗುತ್ತಿಗೆ ನೌಕರರ ಸೇವೆಯನ್ನು ಮುಂದುವರೆಸುವ ಒಳಗೆ ಪ್ರತಿ ನೌಕರರ ಕಾರ್ಯಭಾರ ಹಾಗೂ ಕಾರ್ಯ ನಿರ್ವಹಣೆಯ ಬಗ್ಗೆ ಮಾಹಿತಿ ಪಡೆದುಕೊಂಡು ಸಲ್ಲಿಸಬೇಕೆಂಬ ಷರತ್ತಿಗೊಳಪಟ್ಟು, ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ /ಕಛೇರಿಗಳಲ್ಲಿ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ದಿನಾಂಕ: 17-10-2022ರಿಂದ 6 ತಿಂಗಳುಗಳ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ನಿರ್ಣಯಿಸಿತು.



**ವಿಷಯ ಸಂಖ್ಯೆ 49:** ಪರೀಕ್ಷಾ ವಿಭಾಗದ ಡಿಜಿಟಲ್ ಮೌಲ್ಯಮಾಪನ ಕೇಂದ್ರದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ 02 ಜನ ಸಾಫ್ಟ್‌ವೇರ್ ಡೆವಲಪರ್ಸ್‌ಗಳ ತಾತ್ಕಾಲಿಕ ಸೇವೆಯನ್ನು ಮುಂದುವರೆಸುವ ಹಾಗೂ ಕೆಲಸವನ್ನು ಬಿಟ್ಟಿರುವ ಇಬ್ಬರು ಸಾಫ್ಟ್‌ವೇರ್ ಡೆವಲಪರ್ಸ್‌ಗಳ ಎದುರಾಗಿ ಯು.ವಿ.ಸಿ.ಇ ಉದ್ಯೋಗ ಕೇಂದ್ರದ ಮೂಲಕ ನೇಮಿಸಿಕೊಳ್ಳುವ ಬಗ್ಗೆ.

ಕುಲಸಚಿವ (ಮೌಲ್ಯಮಾಪನ) ಅವರು ಮಾತನಾಡಿ, ಡಿಜಿಟಲ್ ಮೌಲ್ಯಮಾಪನ ಕಾರ್ಯಕ್ಕೆ ಮೊದಲು ನಾಲ್ಕು ಜನ ಸಾಫ್ಟ್‌ವೇರ್ ಡೆವಲಪರ್ಸ್‌ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.28,000/-ಗಳ ಸಂಭಾವನೆಯಂತೆ ಪಡೆದುಕೊಳ್ಳಲಾಗಿತ್ತು. ಸಂಭಾವನೆಯ ಮೊತ್ತ ಕಡಿಮೆ ಇದ್ದುದರಿಂದ ಇಬ್ಬರು ನೌಕರರು ಕೆಲಸವನ್ನು ಬಿಟ್ಟುರುತ್ತಾರೆ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಇಬ್ಬರ ಸೇವಾ ಅವಧಿಯು ದಿನಾಂಕ: 15-10-2022ಕ್ಕೆ ಕೊನೆಗೊಂಡಿರುವುದರಿಂದ ಅವರ ಸೇವೆಯನ್ನು ಮುಂದುವರೆಸಬೇಕು ಹಾಗೂ ಇನ್ನಿಬ್ಬರ ಸೇವೆಯನ್ನು ಯು.ವಿ.ಸಿ.ಇ. ಪ್ಲೇಸ್ಮೆಂಟ್ ಸೆಲ್ ಮೂಲಕ ಪ್ರಕಟಣೆ ನೀಡಿ ಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲು ಅನುಮತಿ ನೀಡಬೇಕೆಂದು ಕೋರಿದರು.

**ನಿರ್ಣಯ:**

ಚರ್ಚೆಯ ನಂತರ, ಡಿಜಿಟಲ್ ಮೌಲ್ಯಮಾಪನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಸಾಫ್ಟ್‌ವೇರ್ ಡೆವಲಪರ್ ಅವರ ಸೇವೆಯನ್ನು ದಿನಾಂಕ: 17-10-2022ರಿಂದ 6 ತಿಂಗಳುಗಳ ಅವಧಿಗೆ ಮುಂದುವರೆಸಲು ಹಾಗೂ ಅವರ ಮಾಹೆಯಾನ ಸಂಭಾವನೆಯನ್ನು ರೂ.28,000/- ದಿಂದ ರೂ.35,000/-ಗಳಿಗೆ ಹೆಚ್ಚಿಸಲು ನಿರ್ಣಯಿಸಿತು.

ಮುಂದುವರೆದು, ಕೆಲಸ ಬಿಟ್ಟಿರುವ ಇಬ್ಬರು ಹೊರಗುತ್ತಿಗೆ ಸಾಫ್ಟ್‌ವೇರ್ ಡೆವಲಪರ್‌ಗಳ ಬದಲಿಯಾಗಿ ಯು.ವಿ.ಸಿ.ಇ. ಪ್ಲೇಸ್ಮೆಂಟ್ ಸೆಲ್ ಮೂಲಕ ಪ್ರಕಟಣೆ ನೀಡಿ ಇಬ್ಬರು ಸಾಫ್ಟ್‌ವೇರ್ ಡೆವಲಪರ್‌ಗಳ ಸೇವೆಯನ್ನು

ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.30,000/-ಗಳ ಸಂಭಾವನೆಯೊಂದಿಗೆ ಪಡೆದುಕೊಳ್ಳಲು ಸಿಂಡಿಕೇಟ್ ಅನುಮತಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 50:** ಶ್ರೀ ಭೀಮರಾವ್ ಮತ್ತು ಶ್ರೀ ಕೆ. ಲಿಂಗರಾಜು, ಅನುಚರರು ಇವರುಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ 787/2019 ರ ಆದೇಶ ದಿನಾಂಕ 16.06.2022 ರಲ್ಲಿ ಇವರುಗಳು ವಿಶ್ವವಿದ್ಯಾಲಯದಲ್ಲಿ ನಿರ್ವಹಿಸಿರುವ ಸೇವೆಯನ್ನು ಪರಿಗಣಿಸಿ ಮಾನ್ಯತೆ ನೀಡಿ ಇವರುಗಳನ್ನು ಚಾಲಕರ ವೃಂದಕ್ಕೆ ನೇಮಕಾತಿ ಮಾಡುವಂತೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿರುವ ಬಗ್ಗೆ.

ಕುಲಸಚಿವರು ವಿಷಯದ ಬಗ್ಗೆ ಮಾಹಿತಿ ನೀಡಿ, ಸರ್ಕಾರದ ಇಲಾಖೆಗಳಲ್ಲಿ ಗ್ರೂಪ್ 'ಡಿ' ನೌಕರರು ವಾಹನ ಚಾಲನೆ ಪರವಾನಿಗೆ ಹೊಂದಿದ್ದರೆ, ಜ್ಯೇಷ್ಠತೆಯನುಸಾರ ಚಾಲಕರ ಹುದ್ದೆಗೆ ನೇಮಿಸಲು ಅವಕಾಶವಿದೆ. ಶ್ರೀ ಭೀಮರಾವ್ ಮತ್ತು ಶ್ರೀ ಕೆ. ಲಿಂಗರಾಜು ಅವರುಗಳು ಗ್ರೂಪ್ 'ಡಿ' ನೌಕರರಾಗಿದ್ದರೂ ಸಹ ಸುಮಾರು ವರ್ಷಗಳಿಂದ ಅವರನ್ನು ವಿಶ್ವವಿದ್ಯಾಲಯದಲ್ಲಿ ವಾಹನ ಚಾಲಕರನ್ನಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಈ ಹಿಂದೆ ವಿಶ್ವವಿದ್ಯಾಲಯದಲ್ಲಿ ಗ್ರೂಪ್ 'ಡಿ' ನೌಕರರಾಗಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಚಾಲಕ ಹುದ್ದೆಯನ್ನು ನೀಡಿರುವ ನಿದರ್ಶನಗಳಿವೆ ಎಂದು ಸಭೆಗೆ ಮಾಹಿತಿ ನೀಡಿ, ನ್ಯಾಯಾಲಯದ ಆದೇಶ ಪಡೆದಿರುವ ಶ್ರೀ ಭೀಮರಾವ್ ಮತ್ತು ಶ್ರೀ ಕೆ. ಲಿಂಗರಾಜು, ಅನುಚರರು ಅವರುಗಳನ್ನು ಭವಿಷ್ಯಾವರ್ತಿಯಾಗಿ ಚಾಲಕರನ್ನಾಗಿ ಸೇರ್ಪಡೆಗೊಳಿಸಬಹುದಾಗಿದೆಯೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ನ್ಯಾಯಾಲಯದ ಆದೇಶಾನುಸಾರ, ಶ್ರೀ ಭೀಮರಾವ್ ಮತ್ತು ಶ್ರೀ ಕೆ. ಲಿಂಗರಾಜು, ಅನುಚರರು ಇವರುಗಳ ಸೇವೆಯನ್ನು ಭವಿಷ್ಯಾವರ್ಥಿಯಾಗಿ ಚಾಲಕರಾಗಿ ಪರಿಗಣಿಸಿ, ಚಾಲಕ ಹುದ್ದೆಗೆ ಅವರ ಸೇವೆಯನ್ನು ಸೇರ್ಪಡೆಗೊಳಿಸಲು ಸಿಂಡಿಕೇಟ್ ನಿರ್ಣಯಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 51:** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ ರಸ್ತೆಗಳಲ್ಲಿ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ.

ಕುಲಸಚಿವರು ಮಾತನಾಡಿ, ದಿನಾಂಕ: 12-10-2022ರಂದು ಮಾನ್ಯ ಕುಲಪತಿಗಳು ಸರ್ಕಾರದ ಪೊಲೀಸ್ ಇಲಾಖೆ ಹಾಗೂ ಸರ್ಕಾರದ ಇತರ ಇಲಾಖೆಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಜ್ಞಾನಭಾರತಿ ಆವರಣದಲ್ಲಿರುವ ರಸ್ತೆಗಳಲ್ಲಿ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ ತೆಗೆದುಕೊಳ್ಳಬೇಕಾದ ಅಲ್ಪ ಕಾಲಾವಧಿ, ಮಧ್ಯಮ ಕಾಲಾವಧಿಯ ಹಾಗೂ ದೀರ್ಘ ಕಾಲಾವಧಿಯ ಕ್ರಮಗಳ ಬಗ್ಗೆ ಸಲಹೆ ನೀಡಲಾಗಿದೆಯೆಂದು ಸದರಿ ಸಭೆಯ ನಡಾವಳಿಗಳಲ್ಲಿನ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿ, ಈಗಾಗಲೇ ರಸ್ತೆ ಉಬ್ಬು, ರಂಬ್ಲರ್

ಸ್ಟ್ರಿಪ್, ಜೀಬ್ರಾ ಕ್ರಾಸಿಂಗ್ ಬಣ್ಣ ಬಳಿಯುವಿಕೆ, ಹೈ ಮಾಸ್ಕ್ ಲೈಟ್ ಅಳವಡಿಕೆ ಕಾರ್ಯ ಪೂರ್ಣಗೊಂಡಿರುವ ಬಗ್ಗೆ ಮಾಹಿತಿ ನೀಡಿದರು.

ಡಾ. ಸುಧಾಕರ ಎಚ್ ಅವರು ಮಾತನಾಡಿ, ನಾಗರಭಾವಿ ಕಡೆಯಿಂದ ಬರುವ ರಸ್ತೆಯನ್ನು ಕೂಡಲೇ ಮುಚ್ಚಬೇಕೆಂದು, ಇದರಿಂದಾಗಿ ಜ್ಞಾನಭಾರತಿ ಆವರಣದಲ್ಲಿ ವಾಹನಗಳ ದಟ್ಟಣೆ ಕಡಿಮೆಯಾಗುವುದಾಗಿ ತಿಳಿಸಿದರು.

ಕುಲಪತಿಗಳು ಉತ್ತರಿಸಿ, ಈ ಬಗ್ಗೆ ಸರ್ಕಾರದೊಡನೆ ಪತ್ರ ವ್ಯವಹಾರ ಮಾಡುವುದಾಗಿ ತಿಳಿಸಿದರು. ಅವರು ಮುಂದುವರೆದು, ಜ್ಞಾನಭಾರತಿ ಆವರಣದಲ್ಲಿ ಅನಧಿಕೃತವಾಗಿ ತೆರೆದಿರುವ ಅಂಗಡಿ ಮುಂಗಟ್ಟುಗಳನ್ನು ಕೂಡಲೇ ತೆರವುಗೊಳಿಸಲು ಕ್ರಮವಹಿಸಲು ಸೂಚಿಸುವುದಾಗಿ ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಜ್ಞಾನಭಾರತಿ ಆವರಣದಲ್ಲಿರುವ ರಸ್ತೆಗಳಲ್ಲಿ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ ಹಾಗು ಸಾರ್ವಜನಿಕ ವಾಹನ ಸಂಚಾರವನ್ನು ನಿರ್ಬಂಧಿಸುವ ಕುರಿತು ದಿನಾಂಕ: 12–10–2022ರಂದು ಕುಲಪತಿಗಳ ಅಧ್ಯಕ್ಷತೆಯಲ್ಲಿ ಸರ್ಕಾರದ ಅಧಿಕಾರಿಗಳು, ಶಿಕ್ಷಕ, ಶಿಕ್ಷಕೇತರ ಮತ್ತು ವಿದ್ಯಾರ್ಥಿಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿ, ಸಾರ್ವಜನಿಕ ವಾಹನಗಳ ಸಂಚಾರದಿಂದ ತೊಂದರೆಯಾಗುತ್ತಿರುವುದರಿಂದ ವಿಶ್ವವಿದ್ಯಾಲಯದ ಜಮೀನಿನ ಗಡಿಭಾಗದಲ್ಲಿ ರಸ್ತೆ ನಿರ್ಮಿಸಲು ಅಥವಾ ಪ್ರಸ್ತುತ ಇರುವ ಮುಖ್ಯರಸ್ತೆ ಮೇಲೆ ಫ್ಲೈವ್ ಓವರ್ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್ ಸೂಚಿಸಿತು.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 52:** ಶ್ರೀ ಬಸವೇಶ್ವರ ಪದವಿ ಕಾಲೇಜು, ವಿಜಯನಗರ, ಬೆಂಗಳೂರು ಇವರಿಗೆ ಬಿ.ಸಿ.ಎ ಕೋರ್ಸಿನ ಹೊಸ ಸಂಯೋಜನೆಯ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸಿನ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಬಸವೇಶ್ವರ ಪದವಿ ಕಾಲೇಜು ವಿಜಯನಗರ, ಬೆಂಗಳೂರು ಇವರಿಗೆ 2021–22ನೇ ಸಾಲಿನಿಂದ ಬಿ.ಸಿ.ಎ ಕೋರ್ಸಿನ ಹೊಸ ಸಂಯೋಜನೆಯನ್ನು ನೀಡುವ ವಿಷಯದಲ್ಲಿ ವಿದ್ಯಾವಿಷಯಕ ಪರಿಷತ್ತಿನ ನಿರ್ಣಯವನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

*Proceedings of the 166th Adjourned meeting of the Syndicate held on 31.10.2022*

**ವಿಷಯ ಸಂಖ್ಯೆ 54:** ಬೆಂಗಳೂರು ವಿಶ್ವವಿದ್ಯಾಲಯದ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಆವರಣದಲ್ಲಿ ಪರಿವರ್ತನಕಾರರ ಹೆಸರುಗಳು ಮತ್ತು ಅವರ ಸಂದೇಶಗಳು ಗ್ರಾನೈಟ್ ಕಲ್ಲಿನಲ್ಲಿ ಬರೆಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಆವರಣದಲ್ಲಿ ಪರಿವರ್ತನಕಾರರ ಹೆಸರುಗಳು ಮತ್ತು ಅವರ ಸಂದೇಶಗಳನ್ನು ಒಳಗೊಂಡ ಒಟ್ಟು 33 ಗ್ರಾನೈಟ್ ಕಲ್ಲಿನ ನಾಮಫಲಕಗಳನ್ನು ಫ಼ಿಟ್ಟಿಂಗ್ ಸಹಿತ ಅಳವಡಿಸಲು ಆಗುವ ಅಂದಾಜು ವೆಚ್ಚ ಜಿ.ಎಸ್.ಟಿ. ಸೇರಿದಂತೆ ರೂ.3,15,470/-(ಮೂರು ಲಕ್ಷ ಹದಿನೈದು ಸಾವಿರದ ನಾಲ್ಕು ನೂರ ಎಪ್ಪತ್ತು ರೂಪಾಯಿಗಳು)ರ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು.

*Proceedings of the 166th Adjourned meeting of the Syndicate held on 31.10.2022*

**Item No. 55:** Appointing Prof. S.C Sharma, Director, NAAC as Honorary Distinguished visiting faculty in Bangalore University

Dr. Sudhakara H, informed that Prof. S.C Sharma, is an eminent academician, Researcher and Administrator and several institute of National importance have appointed him as a visiting Professor. It would be helpful for the University, if the University appoints him as Honorary Distinguished Visiting Professor.

## *Resolution:*

After detailed discussion, the Syndicate considered the proposal of the Chairman, Department of Mechanical Engineering, UVCE and resolved to appoint Prof. S.C. Sharma, Director, National Assessment and Accreditation Council and Former Vice-Chancellor, Tumkur University, as Honorary Distinguished Visiting Professor, to UVCE and Bangalore University as per the guidelines issued by the UGC vide letter D.O. No. F.9-1/2010 (PS/Misc.)Pt.Vol.II dated 03.06.2019.

**ವಿಷಯ ಸಂಖ್ಯೆ 56:** ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ ಇವರು ಸೂಚಿಸಿರುವಂತೆ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳ ನೇಮಕಾತಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಸಂ: SLP(C) 5494/2022 ರ ದಾವೆಯ ಪರವಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ವಾದ ಮಂಡಿಸಿದ ವಕೀಲರಿಗೆ ವೃತ್ತಿ ಸಂಭಾವನೆಯನ್ನು ಪಾವತಿಸಲು ಆದೇಶಿಸಿರುವ ಆದೇಶವನ್ನು ಅನುಸಮರ್ಥಿಸುವ ಬಗ್ಗೆ.

ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಸಂ: SLP(C) 5494/2022 ರ ದಾವೆಯಲ್ಲಿ ರಾಜಭವನದ ಪರವಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದ ಸರ್ವೋಚ್ಚ ನ್ಯಾಯಾಲಯದ ವಕೀಲರುಗಳಾದ ಶ್ರೀಮತಿ ಪಿಂಕಿ ಆನಂದ್, ಶ್ರೀ ಬಾಲೆಂದು ಶೇಖರ್ ಹಾಗೂ ಶ್ರೀ ಶೈಲೇಷ್ ಮಡಿಯಾಳ್ ಇವರುಗಳಿಗೆ ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು, ರಾಜಭವನ ಇವರ ಪತ್ರ ಸಂಖ್ಯೆ ಜಿ.ಎಸ್. 15 ಬಿ.ಯು.ಎಂ. 2022 ದಿನಾಂಕ: 08-08-2022ರಲ್ಲಿನ ನಿರ್ದೇಶನದಂತೆ ಅನುಕ್ರಮವಾಗಿ ರೂ.6,80,000/-, ರೂ.80,000/- ಮತ್ತು ರೂ.80,000/- ಪಾವತಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.



**Item No. 57** : Recommending the names of the eminent personalities for conferring Doctorate degree at the 57th Annual Convocation of Bangalore University and nomination to the Screening Committee.

***Resolution:***

The Syndicate considered the proposal as per provisions of Section 69 of K.S.U Act, 2000 read with Statutes 13 (1) & (2) and recommended the names of eminent personalities for conferment of Honorary Degree for consideration of the Expert Scrutiny Committee to be constituted by the Hon'ble Governor of Karnataka.

Further, the Syndicate resolved to nominate Prof. Lingaraju Gandhi, Vice-Chancellor, Bengaluru City University as the nominee of Bangalore University to the Expert Scrutiny Committee to be constituted by the Hon'ble Governor of Karnataka.

The Vice-Chancellor informed that the names of the dignitaries recommended by the Syndicate will be placed before the Expert Scrutiny Committee to be constituted by the Hon'ble Governor of Karnataka and Chancellor.

***Proceedings of the 166th Adjourned meeting of the Syndicate held on 31.10.2022***

**Item No. 58:** Nomination of three experts in the subject and /or allied subject to the faculty of Engineering, Bangalore University, Bengaluru for re-constitution of the Faculty-reg.

***Resolution:***

The Syndicate resolved to nominate the following experts on the Faculty of Engineering for a period of two years as per Statutes 6.1:

1. Dr. J.M. Chandra Kishen, Professor, Department of Civil Engineering, Indian Institute of Science, Bengaluru-560 012;
2. Dr. Krishna M, Professor and Head, Department of Mechanical Engineering, R.V. College of Engineering, Bengaluru-560 059;
3. Dr. Sumathi, Professor, Department of Electrical Engineering, RNSIT, Bengaluru-560 098.

***Proceedings of the 166th Adjourned meeting of the Syndicate held on 31.10.2022***

**ವಿಷಯ ಸಂಖ್ಯೆ 59:** ದಿನಾಂಕ: 10.10.2022ರಂದು ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಕು.ಆರ್. ಶಿಲ್ಪಶ್ರೀ, ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯ ಮೇಲೆ ಬಿ.ಎಂ.ಟಿ.ಸಿ. ಬಸ್ ಹರಿದ ಕಾರಣ ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿದ್ದು ಇವರ ಕುಟುಂಬಕ್ಕೆ ಜೀವನ ನಿರ್ವಹಣೆಗೆ ನೆರವಾಗುವ ಬಗ್ಗೆ.

ಶ್ರೀ ಗೋಪಿನಾಥ್ ಅವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಈ ಮೊದಲು ಅಪಘಾತಗಳಿಂದ ಮೃತಪಟ್ಟ ವಿದ್ಯಾರ್ಥಿಗಳ ಕುಟುಂಬಕ್ಕೆ ಹಣಕಾಸು ನೆರವು ನೀಡಿದ ನಿದರ್ಶನಗಳಿವೆಯೇ ಎಂಬುದರ ಬಗ್ಗೆ ಮಾಹಿತಿ ಬಯಸಿದರು.

ಕುಲಪತಿಗಳು ಮಾತನಾಡಿ, ಇಂತಹ ನಿದರ್ಶನಗಳು ಇರುವುದಿಲ್ಲ, ವಿಶ್ವವಿದ್ಯಾಲಯದ ವತಿಯಿಂದ ಹಣಕಾಸು ನೆರವು ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದರೆ ವಿಶ್ವವಿದ್ಯಾಲಯವು ಕು.ಆರ್. ಶಿಲ್ಪಶ್ರೀ ಅವರ ಸಹೋದರಿಗೆ ಉಚಿತ ಶಿಕ್ಷಣ ನೀಡಬಹುದಾಗಿದೆ. ಮಾನವೀಯತೆಯ ದೃಷ್ಟಿಯಿಂದ ಸ್ವಇಚ್ಛೆಯಿಂದ ಶಿಕ್ಷಕರು/ಶಿಕ್ಷಕೇತರ ಸಿಬ್ಬಂದಿಗಳು, ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಅಪಘಾತದಿಂದ ಮೃತಪಟ್ಟ ಕು.ಆರ್. ಶಿಲ್ಪಶ್ರೀ, ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯ ಕುಟುಂಬಕ್ಕೆ ಸಹಾಯ ನೀಡಬಹುದಾಗಿದೆ ಎಂದು ತಿಳಿಸಿದರು.

***ನಿರ್ಣಯ:***

ಸುದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಅಪಘಾತದಿಂದ ಮೃತಪಟ್ಟ ಕು.ಆರ್. ಶಿಲ್ಪಶ್ರೀ, ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯ ಸಹೋದರಿಗೆ ಅವರು ಅರ್ಹರಿರುವ ವಿಶ್ವವಿದ್ಯಾಲಯದ

ಸ್ನಾತಕೋತ್ತರ ವಿಭಾಗದಲ್ಲಿ ಪ್ರವೇಶ ಬಯಸಿದಲ್ಲಿ ಅವರಿಗೆ ಸೂಪರ್ ನ್ಯೂಮರರಿ ಕೋಟಾದಲ್ಲಿ ಒಂದು ಸೀಟನ್ನು ನೀಡಬೇಕೆಂದು ಹಾಗೂ ಅವರಿಗೆ ಉಚಿತ ಸ್ನಾತಕೋತ್ತರ ಶಿಕ್ಷಣ ನೀಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು. ಈ ಬಗ್ಗೆ ಕೂಡಲೇ ಒಂದು ಪತ್ರವನ್ನು ಅವರ ಕುಟುಂಬಕ್ಕೆ ಕಳುಹಿಸಿಕೊಡಬೇಕೆಂದು ಸೂಚಿಸಿತು.

ಕುಲಪತಿಗಳು ತಮ್ಮ ಒಂದು ದಿನದ ವೇತನವನ್ನು ನೀಡುವುದಾಗಿ ತಿಳಿಸಿದರು. ಸಿಂಡಿಕೇಟ್ ಸಭೆಯಲ್ಲಿ ಹಾಜರಿದ್ದ ಸಿಂಡಿಕೇಟ್ ಸದಸ್ಯರುಗಳು ಸ್ವಇಚ್ಛೆ ವ್ಯಕ್ತಪಡಿಸಿದಲ್ಲಿ ಅವರ ದಿನಾಂಕ: 31–10–2022ರ ಸಿಂಡಿಕೇಟ್ ಸಭೆಯ ಆಸನ ಭತ್ಯೆಯನ್ನು ಮೇಲ್ಕಂಡ ವಿದ್ಯಾರ್ಥಿನಿಯ ಕುಟುಂಬಕ್ಕೆ ನೀಡಲಾಗುವುದು ಎಂದು ತಿಳಿಸಿದರು. ಅವರು ಮುಂದುವರೆದು, ಶಿಕ್ಷಕರು/ಶಿಕ್ಷಕೇತರ ನೌಕರರು ಸ್ವಇಚ್ಛೆಯಿಂದ ಧನಸಹಾಯ ಮಾಡುವುದಾದರೆ ಅವರ ಒಂದು ದಿನದ ಸಂಬಳವನ್ನು ನೀಡಬಹುದಾಗಿದೆ. ಆದರೆ, ಈ ವಿಷಯವು ಸದರಿ ನೌಕರರ ಸಂಘಕ್ಕೆ ಬಿಟ್ಟ ವಿಷಯವಾಗಿರುತ್ತದೆ ಎಂದರು.

ಕುಲಸಚಿವರು ಮಾತನಾಡಿ, ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರೊಂದಿಗೆ ಚರ್ಚಿಸಿದ್ದು, ಕು.ಆರ್. ಶಿಲ್ಪಶ್ರೀ ಅವರ ಕುಟುಂಬಕ್ಕೆ ವಿಮೆಯ ಮೊತ್ತವನ್ನು ಮಂಜೂರು ಮಾಡಿಸಲು ನ್ಯಾಯಾಲಯದಲ್ಲಿ ಸೂಕ್ತವಾಗಿ ವಾದಿಸಲು ಕ್ರಮ ಕೈಗೊಂಡಿದ್ದು ಹಾಗೂ ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ಧನ ಸಹಾಯ ಕೊಡಿಸುವ ಭರವಸೆ ನೀಡಿದ್ದಾರೆ. ಈ ಬಗ್ಗೆ ಮತ್ತೊಮ್ಮೆ ನೆನಪೋಲೆಯನ್ನು ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು.

**ವಿಷಯ ಸಂಖ್ಯೆ 60:** ರಹಸ್ಯ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಯ ಸಂಖ್ಯೆ ನೀಡುವ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ರಹಸ್ಯ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಏಳು ಜನ ಬೋಧಕೇತರ ಸಿಬ್ಬಂದಿಗೆ ವಾರ್ಷಿಕವಾಗಿ 30 ದಿನಗಳ ಸಾರಿಗೆ ಭತ್ಯೆಯನ್ನು ನೀಡಲು ಹಾಗು ಪ್ರಸ್ತುತ ನೀಡುತ್ತಿರುವ ಸಾರಿಗೆ ಭತ್ಯೆಯನ್ನು ಕೆಳಕಂಡಂತೆ ಪರಿಷ್ಕರಿಸಲು ಸಿಂಡಿಕೇಟ್ ಅನುಮೋದಿಸಿತು.

a) For Group A officials - CA at Rs.550/- per day.
b) For Group B officials - CA at Rs.530/- per day.
c) For Group C officials - CA at Rs.510/- per day.
d) For Group D officials - CA at Rs.400/- per day.

**Item No. 61** : Obtaining Recommendation of a Committee for enhancement of Scholarship amount to Research Scholars.

It was informed that the UGC has framed a guidelines for enhancement of Scholarship amount/sanction of SRF. On the same line, a report may be obtained from

a committee for enhancement of scholarship amount to research scholars for the $4^{th}$ and $5^{th}$ year. This will enable to monitor the progress of research carried out by the Research Students and timely submission of thesis.

***Resolution:***

After detailed discussions, the Syndicate resolved to obtain the recommendation of a Committee consisting of the following members to be constituted at the departmental level for sanction of enhancement of scholarship amount to Research Scholars of SC/ST category from Rs. 22,000/- to Rs. 25,000/- for the $4^{th}$ and $5^{th}$ year of their research period.

1. The Chairperson of the respective Department
2. Concerned Guide
3. One expert nominated by the Departmental Council

**ವಿಷಯ ಸಂಖ್ಯೆ 62:** ಶ್ರೀ ವೆಂಕಟೇಶ್ ಎನ್, ಗ್ರೂಪ್ ಡಿ Forensic Science Course, Department of Zoology ಇವರನ್ನು ವಿಶ್ವವಿದ್ಯಾಲಯವು ಕಡ್ಡಾಯ ನಿವೃತ್ತಿಗೊಳಿಸಿರುವುದನ್ನು ಹಿಂಪಡೆಯುವಂತೆ ಮನವಿ ಸಲ್ಲಿಸಿರುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ವೆಂಕಟೇಶ್ ಎನ್, ಗ್ರೂಪ್ ಡಿ Forensic Science Course, Department of Zoology ಇವರು 172 ದಿನ ಅನಧಿಕೃತ ಗೈರುಹಾಜರಾತಿ ಸಂಬಂಧ ಮಾಡಿರುವ ದೋಷಾರೋಪಗಳ ಬಗ್ಗೆ ಅವರು ಶ್ರದ್ದೆ, ಧೃಡತೆ, ನಿಷ್ಠೆ ಹಾಗೂ ವಿಶ್ವಾಸ ಇಲ್ಲದಿರುವ ಬಗ್ಗೆ ಆರೋಪ ಸಾಬೀತಾಗಿದೆ ಎಂದು ವಿಚಾರಣಾಧಿಕಾರಿಗಳು ಸ್ಪಷ್ಟವಾಗಿ ನೀಡಿರುವ ಹಿನ್ನೆಲೆಯಲ್ಲಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ವಿಧಿಸಿರುವ ಕಡ್ಡಾಯ ನಿವೃತ್ತಿ ಶಿಕ್ಷೆಯನ್ನು ಹಿಂಪಡೆಯುವಂತೆ ಸಲ್ಲಿಸಿರುವ ಸದರಿಯವರ ಮನವಿಯನ್ನು ಪರಿಗಣಿಸದೇ ಇರಲು ಸಿಂಡಿಕೇಟ್ ನಿರ್ಣಯಿಸಿ, ಹಿಂದಿನ ಸಿಂಡಿಕೇಟ್ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸೂಚಿಸಿತು.

**ಸಾಮಾನ್ಯ ಚರ್ಚೆ:-**

1. 57ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಮತ್ತು ನಗದು ಬಹುಮಾನ ನೀಡುವ ಬಗ್ಗೆ ಪಟ್ಟಿಯನ್ನು ಅಂತಿಮಗೊಳಿಸುವ ಸಂಬಂಧ ವಿಶ್ವವಿದ್ಯಾಲಯ ರಚಿಸುವ ಸಮಿತಿಗೆ ಶ್ರೀ ವಿಧೇಯ ಬೆಳಗೋಡೆ ಶ್ರೀಕಂಠ ಅವರನ್ನು ಸದಸ್ಯರನ್ನಾಗಿ ಸಿಂಡಿಕೇಟ್ ನಾಮನಿರ್ದೇಶನ ಮಾಡಲು ನಿರ್ಣಯಿಸಿತು.

2. ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಅತಿಥಿಗಳನ್ನು ಆಹ್ವಾನಿಸುವ ಮೊದಲು ಕುಲಪತಿಗಳ ಅನುಮೋದನೆ ಪಡೆದುಕೊಳ್ಳಬೇಕೆಂದು ಮತ್ತು ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಸಿಂಡಿಕೇಟ್ ಸದಸ್ಯರುಗಳನ್ನು ಆಹ್ವಾನಿಸಬೇಕು ಹಾಗೂ ಆಹ್ವಾನ ಪತ್ರಿಕೆಯಲ್ಲಿ ಸಿಂಡಿಕೇಟ್ ಸದಸ್ಯರ ಹೆಸರುಗಳನ್ನು ನಮೂದಿಸಲು ಒಂದು ಸುತ್ತೋಲೆ ಕಳುಹಿಸಿಕೊಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

3. ವಿದ್ಯಾರ್ಥಿಗಳ ಮನವಿ ಬಗ್ಗೆ ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ ಡಾ. ರಾಜಪ್ಪ ದಳವಾಯಿ ಅವರಿಗೆ ವೃತ್ತಿ ಪ್ರಗತಿ ಯೋಜನೆಯಡಿಯಲ್ಲಿ ಬಡ್ತಿ ನೀಡುವ ಬಗ್ಗೆ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಕಾನೂನು ಅಭಿಪ್ರಾಯ ಪಡೆಯಬೇಕೆಂದು ನಿರ್ಣಯಿಸಲಾಗಿತ್ತು. ಆದರೆ ಇದುವರೆವಿಗೆ ವಿಷಯವನ್ನು ಮಂಡಿಸಿರುವುದಿಲ್ಲ. ಬೇರೆ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಡಾ. ವಿಶ್ವಪ್ರಸಾದ್ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಲ್ಲಾ ಸೌಲಭ್ಯ ನಿಡಲಾಗಿದೆ. ಡಾ. ರಾಜಪ್ಪ ದಳವಾಯಿ ಅವರ ಬಡ್ತಿಯ ಬಗ್ಗೆ ಎರಡೂ ವರ್ಷಗಳಿಂದ ಚರ್ಚೆ ನಡೆಯುತ್ತಲೇ ಇದೆ. ಹಿಂದಿನ ಕುಲಪತಿಗಳು ಸಿಂಡಿಕೇಟ್ ಸಭೆಯಲ್ಲಿ ಅವರಿಗೆ ಸಿ.ಎ.ಎಸ್. ಅಡಿಯಲ್ಲಿ ಮುಂಬಡ್ತಿ ನೀಡಲು ಒಪ್ಪಿದ್ದರು. ಆದರೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲವೆಂದು ತಿಳಿಸಿ ಅವರ ಸಮಸ್ಯೆಯನ್ನು ಆದಷ್ಟುಬೇಗ ಪರಿಹರಿಸಲು ಕೋರಿದರು.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಡಾ. ರಾಜಪ್ಪ ದಳವಾಯಿ ಪ್ರತಿಭಾವಂತ ಶಿಕ್ಷಕರಾಗಿದ್ದು, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅವರು ಪ್ರಸ್ತಾಪಿಸಿರುವಂತೆ, ಕ್ರಮ ತೆಗೆದುಕೊಳ್ಳಲು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಪ್ರೊ. ಜಯಕುಮಾರ್ ಜಿ ರೆಡ್ಡಿ ಅವರ ಸೇವಾ ವಿವರದ ಬಗ್ಗೆ ವರದಿ ನೀಡಲು ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಆದರೆ ಸಮಿತಿಯ ಸಭೆಯನ್ನು ಕರೆಯಲು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲವೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಪ್ರೊ. ಟಿ.ವಿ. ರಾಜು ಅವರು ಡಾ. ರಾಜಪ್ಪ ದಳವಾಯಿ ಅವರಿಗೆ ಮುಂಬಡ್ತಿ ನೀಡುವ ಬಗ್ಗೆ ಹಾಗೂ ಪ್ರೊ. ಜಯಕುಮಾರ್ ಜಿ ರೆಡ್ಡಿ ಅವರ ಸೇವಾ ವಿಷಯದ ಬಗ್ಗೆ ಒಂದು ವಾರದೊಳಗೆ ವರದಿ ನೀಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

4. ಶ್ರೀ ಉದಯಕುಮಾರ್ ಎಂ ಹಾಗೂ ಸುಧಾಕರ ಎಚ್ ಅವರುಗಳು ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ದಿನಗೂಲಿ ನೌಕರರ ಸೇವೆಯನ್ನು ಖಾಯಂ ಮಾಡುವ ಬಗ್ಗೆ ಚರ್ಚೆ ನಡೆದು ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಪ್ರಕಾರ ನಾಲ್ಕು ಷರತ್ತುಗಳನ್ನು ಪೂರೈಸಿದ್ದ ಅರ್ಹ ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ ನಿರ್ಣಯ ಆಗಿತ್ತು. ಆದರೆ, ನಿರ್ಣಯದಲ್ಲಿ ಸಿಂಡಿಕೇಟ್ ಸಭೆಯ ನಂತರ ಬಂದಿರುವ ಸರ್ಕಾರದ ಪತ್ರವನ್ನು ಉಲ್ಲೇಖಿಸಿರುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿ, ಅರ್ಹ ನೌಕರರನ್ನು ಖಾಯಮಾತಿ ಮಾಡಬೇಕೆಂದು ಹಾಗೂ ಅಲ್ಲಿಯವರೆಗೆ ಪ್ರಸ್ತುತ, ನೀಡುತ್ತಿರುವ ಬಾಡಿಗೆ ಭತ್ಯೆ ಹಾಗೂ ತುಟ್ಟಿ ಭತ್ಯೆಯನ್ನು

ಶೇ100ರಷ್ಟು ಹೆಚ್ಚಿಸಬೇಕೆಂದು ತಿಳಿಸಿದರು. ಇದರಿಂದಾಗಿ ಹೆಚ್ಚೇನು ವಿಶ್ವವಿದ್ಯಾಲಯಕ್ಕೆ ಹೊರೆಯಾಗುವುದಿಲ್ಲವೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಸರ್ಕಾರದ ನಿರ್ದೇಶನವನ್ನು ಪಡೆದು (ನಿಯಮಾನುಸಾರ) ದಿನಗೂಲಿ ನೌಕರರ ಖಾಯಮಾತಿಯ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು, ಇನ್ನು ಅವರಿಗೆ ನೀಡುತ್ತಿರುವ ತುಟ್ಟಿ ಭತ್ಯೆ ಹಾಗೂ ಮನೆ ಮಾಡಿಗೆ ಭತ್ಯೆಗಳನ್ನು ಶೇ100ಕ್ಕೆ ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಕಾನೂನಾತ್ಮಕವಾಗಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

5. ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ ದೇಶದಲ್ಲಿ 57 ವಿಶ್ವವಿದ್ಯಾಲಯಗಳು ಆನ್-ಲೈನ್ ಕೋರ್ಸುಗಳನ್ನು ಪ್ರಾರಂಭಿಸಿದ್ದು, ಬೆಂಗಳೂರು ವಿಶ್ವವಿದ್ಯಾಲಯವೂ ಸಹ ಆನ್-ಲೈನ್ ಕೋರ್ಸುಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಬೇಕು. ಪರೀಕ್ಷಾ ಭವನಕ್ಕೆ ಲಿಫ್ಟ್ ವ್ಯವಸ್ಥೆ ಮಾಡಲು, ಪ್ರೊ. ಕೆ. ವೆಂಕಟಗಿರಿ ಗೌಡ ಮತ್ತು ಡಾ. ಹೆಚ್.ಎನ್. ಸಭಾಂಗಣಗಳನ್ನು ಬಾಡಿಗೆ ಕೊಡುವ ಸಂದರ್ಭದಲ್ಲಿ ಬಾಡಿಗೆ ದರವನ್ನು ನಿಗದಿಪಡಿಸಲು ಹಾಗೂ ಡೀನರುಗಳಿಗೆ ಒಂದು ಕಚೇರಿಯ ವ್ಯವಸ್ಥೆಯನ್ನು ಮಾಡಬೇಕೆಂದು ಕೋರಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಆನ್-ಲೈನ್ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಕೆಳಕಂಡ ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಣಯಿಸಿತು.

| | |
|---|---|
| ಅ) ಪ್ರೊ. ವಿ.ವಿ. ಸುರೇಶ್ ಬಾಬು | ಅಧ್ಯಕ್ಷರು |
| ಆ) ಪ್ರೊ. ಸಿಂಥಿಯಾ ಮೆನೇಜಸ್<br>ನಿರ್ವಹಣಾ ವಿಭಾಗ | ಸದಸ್ಯರು |
| ಇ) ಪ್ರೊ. ಸುರೇಶ್ ವಿ ನಾಡಗೌಡರ್<br>ಕಾನೂನು ವಿಭಾಗ | ಸದಸ್ಯರು |
| ಈ) ಪ್ರೊ. ಎಂ ಹನುಮಂತಪ್ಪ,<br>ಎಂ.ಸಿ.ಎ. ವಿಭಾಗ | ಸದಸ್ಯರು |
| ಉ) ಅಧೀಕ್ಷಕರು<br>ವಿದ್ಯಾಕಾರ್ಯಶಾಖೆ-2 | ಸಂಚಾಲಕರು |

6. ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯ ಹಾಗೂ ಮಾಧ್ಯಮದೊಂದಿಗೆ ಮತ್ತು ಹೊರ ಸಂಸ್ಥೆಗಳೊಂದಿಗೆ ವ್ಯವಸ್ಥಿತವಾಗಿ ಸಂಪರ್ಕವಿಟ್ಟುಕೊಳ್ಳಲು ಸಾರ್ವಜನಿಕ ಸಂಪರ್ಕಾಧಿಕಾರಿಯವರ ಸೇವೆ ಅಗತ್ಯವಿದೆ. ಇದರಿಂದ ವಿಶ್ವವಿದ್ಯಾಲಯದ ಘನತೆಯನ್ನು ಹೆಚ್ಚಿನ ಮಟ್ಟದಲ್ಲಿ ಬಿಂಭಿಸಲು ಅನುಕೂಲವಾಗುತ್ತದೆ. ಆದಕಾರಣ ಒಬ್ಬ ಸಾರ್ವಜನಿಕ ಸಂಪರ್ಕಾಧಿಕಾರಿಯವರ ಸೇವೆಯನ್ನು ಪಡೆದುಕೊಳ್ಳಲು ಸಿಂಡಿಕೇಟ್ ಅನುಮೋದನೆ ಬೇಕೆಂದು ಕೋರಿದರು.

**ನಿರ್ಣಯ:**

ಚರ್ಚೆಯ ನಂತರ, ಒಬ್ಬ ಸಾರ್ವಜನಿಕ ಸಂಪರ್ಕಾಧಿಕಾರಿಯವರ ಸೇವೆಯನ್ನು ಪಡೆದುಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು.

7. ಡಾ. ಸುಧಾಕರ ಎಚ್ ಅವರು ಮಾತನಾಡಿ, ಮಹಿಳಾ ಅಧ್ಯಯನ ವಿಭಾಗದಲ್ಲಿ ಡಾ. ಕವಿತ ಎಂಬ ಪ್ರತಿಭಾವಂತ ಅತಿಥಿ ಉಪನ್ಯಾಸಕಿಯ ನೈಪುಣ್ಯತೆಯನ್ನು ಗಣನೆಗೆ ತೆಗೆದುಕೊಂಡಿಲ್ಲ ಹಾಗೂ ಅವರಿಗೆ ಕಾರ್ಯಭಾರ ಹಂಚಿಕೆಯಲ್ಲಿ ಅನ್ಯಾಯವಾಗಿರುತ್ತದೆಂದು ತಿಳಿಸಿದರು.

   ಪ್ರೊ. ಟಿ.ವಿ. ರಾಜು ಅವರು ಮಾತನಾಡಿ ಅವರ ನೇತೃತ್ವದಲ್ಲಿ ರಚಿಸಿದ ಸಮಿತಿಯು ಸದರಿ ವಿಷಯದ ಬಗ್ಗೆ ಮಾಹಿತಿ ಸಲ್ಲಿಸಲು ತಿಳಿಸಲಾಗಿತ್ತು. ಮಹಿಳಾ ಅಧ್ಯಯನ ವಿಭಾಗದ ನಿರ್ದೇಶಕರಾದ ಡಾ. ಸಿದ್ದಪ್ಪ ಬೆಳಗಟ್ಟಿ ಅವರು ಯಾವುದೇ ಮಾಹಿತಿ ಒದಗಿಸಲಿಲ್ಲ. ಅದ್ದರಿಂದ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು

   ಕುಲಪತಿಗಳು ಮಾತನಾಡಿ, ಮಹಿಳಾ ಅಧ್ಯಯನ ವಿಭಾಗದ ನಿರ್ದೇಶಕರನ್ನು ಕರೆಸಿ ಈ ಬಗ್ಗೆ ಮಾತನಾಡುವುದಾಗಿ ತಿಳಿಸಿದರು.

8. ಕುಲಸಚಿವರು (ಮೌಲ್ಯಮಾಪನ) ಅವರು ಮಾತನಾಡಿ, ಸಹಾಯಕ ವೃಂದದ ಶಿಕ್ಷಕೇತರ ನೌಕರರೊಬ್ಬರು ಕುಲಪತಿಯವರ ಚೇಂಬರ್‌ನಲ್ಲಿ ಶಾಶಸನಬದ್ಧ ಅಧಿಕಾರಿಯಾದ ನನ್ನನ್ನು ಏಕವಚನದಲ್ಲಿ ಸಂಬೋಧಿಸಿ ನಿಂದಿಸಿದ್ದಾರೆ. ಈ ಬಗ್ಗೆ ಕುಲಪತಿಗಳಿಗೆ ಲಿಖಿತವಾಗಿ ದೂರು ಪತ್ರವನ್ನು ಸಲ್ಲಿಸಿದ್ದು ಸದರಿ ನೌಕರರ ಮೇಲೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರೊ. ಟಿ.ವಿ. ರಾಜು ಮತ್ತು ಡಾ. ಸುಧಾಕರ ಎಚ್ ಅವರುಗಳು ಮಾತನಾಡಿ ಹಿಂದಿನ ಕುಲಪತಿಗಳ ಅವಧಿಯಲ್ಲಿ ಸಿಂಡಿಕೇಟ್ ಸಭೆ ನಡೆಯುತ್ತಿದ್ದ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಶಿಕ್ಷಕೇತರ ನೌಕರರ ಸಂಘದ ಪದಾಧಿಕಾರಿಗಳು ಸಿಂಡಿಕೇಟ್ ಸಭೆ ನಡೆಯುತ್ತಿದ್ದ ಬೋರ್ಡ್ ರೂಮ್ ನಲ್ಲಿ ಸದಸ್ಯರುಗಳನ್ನು ಕೂಡಿಹಾಕಿ ಸಿಂಡಿಕೇಟ್ ಸದಸ್ಯರ ವಿರುದ್ಧ ಅಸಂಸಧೀಯ ಶಬ್ಧಗಳನ್ನು ಉಪಯೋಗಿಸಿದ್ದರು. ಈ ಬಗ್ಗೆ ಸಿಂಡಿಕೇಟ್ ಸದಸ್ಯರುಗಳು ಲಿಖಿತವಾಗಿ ದೂರು ಸಲ್ಲಿಸಿದ್ದರೂ ಸಹ ಇಲ್ಲಿಯವರೆಗೂ ಏನೂ ಕ್ರಮ ತೆಗೆದುಕೊಂಡಿರುವುದಿಲ್ಲ. ಸಂಬಂಧಿಸಿದವರ ವಿರುದ್ಧ ನೋಟೀಸ್ ಜಾರಿ ಮಾಡಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

**ನಿರ್ಣಯ:**

ಮೇಲ್ಕಂಡ ವಿಷಯಗಳ ಕುರಿತು ಸಂಬಂಧಪಟ್ಟವರಿಗೆ ನೋಟೀಸ್ ಜಾರಿ ಮಾಡಿ ವಿವರಣೆ ಪಡೆಯಲು ಸಿಂಡಿಕೇಟ್ ನಿರ್ಣಯಿಸಿತು.

9. ಡಾ. ಸಿ.ಆರ್. ಮಹೇಶ್ ಅವರು ಮಾತನಾಡಿ ಜೆ.ಆರ್.ಎಫ್. ಫೆಲೋಷಿಪ್ ಪಡೆಯುವ ವಿದ್ಯಾರ್ಥಿಗಳಿಗೆ ವಿಭಾಗಗಳಲ್ಲಿ ಪಾಠ ಪ್ರವಚನಗಳನ್ನು ನಡೆಸಲು ವಾರಕ್ಕೆ ಆರು ಗಂಟೆಗಳ ಕಾಲಾವಧಿಗೆ ಕಾರ್ಯಭಾರವನ್ನು ವಹಿಸಲಾಗುತ್ತಿದೆ. ಅದೇ ಕ್ರಮದಂತೆ ವಿಶ್ವವಿದ್ಯಾಲಯದಿಂದ ಫೆಲೋಷಿಪ್ ನೀಡುತ್ತಿರುವ ವಿದ್ಯಾರ್ಥಿಗಳಿಗೆ ವಾರಕ್ಕೆ ನಿರ್ದಿಷ್ಠ ತರಗತಿಗಳಿಗೆ ಪಾಠ ಮಾಡಲು ಸೂಕ್ತ ಆದೇಶ ನೀಡಬೇಕೆಂದು ತಿಳಿಸಿದರು. ಇದರಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುವುದೆಂದರು.

**ನಿರ್ಣಯ:**

ಚರ್ಚೆಯ ನಂತರ ಬೆಂಗಳೂರು ವಿಶ್ವವಿದ್ಯಾಲಯದ ವತಿಯಿಂದ ಫೆಲೋಷಿಪ್ ನೀಡುತ್ತಿರುವ ವಿದ್ಯಾರ್ಥಿಗಳು ಜೆ.ಆರ್.ಎಫ್. ವಿದ್ಯಾರ್ಥಿಗಳಂತೆ ನಿಗದಿತ ಅವಧಿಗೆ ಬೋಧನೆ ಮಾಡಲು ಕಾರ್ಯಭಾರವನ್ನು ವಹಿಸಬೇಕೆಂದು ಸಂಬಂಧಿಸಿದ ವಿಭಾಗಗಳ ಅಧ್ಯಕ್ಷರುಗಳಿಗೆ ಕೂಡಲೇ ಸುತ್ತೋಲೆ ಹೊರಡಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

10. ಡಾ. ಸುಧಾಕರ ಎಚ್ ಮತ್ತು ಶ್ರೀ ಉದಯ ಕುಮಾರ ಎಂ ಅವರುಗಳು ವಿದ್ಯಾರ್ಥಿಗಳ ಮನವಿಯ ಬಗ್ಗೆ ಮಾತನಾಡಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತೋತ್ಸವನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲು ಈಗಾಗಲೇ ಸಿಂಡಿಕೇಟ್ ಅನುಮೋದಿಸಿದೆ. ಆದ್ದರಿಂದ ನವೆಂಬರ್ 15, 2022ರ ಒಳಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಕೋರಿದರು. ಶ್ರೀ ವಿದೇಯ ಬೆಳಗೋಡೆಯವರು ಮಾತನಾಡಿ ಕಾರ್ಯಕ್ರಮಕ್ಕೆ ವೆಚ್ಚವನ್ನು ಬಿಡುಗಡೆ ಮಾಡಲು ಕೋರಿದರು.

ವಿತ್ತಾಧಿಕಾರಿಯವರು ಮಾತನಾಡಿ, ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಗ್ಗೆ ಕಾರ್ಯಯೋಜನೆಯನ್ನು ಸಿದ್ಧಪಡಿಸಿಕೊಡಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತೋತ್ಸವವನ್ನು ನವೆಂಬರ್‌ನಲ್ಲಿ ನಡೆಸಲು ಕ್ರಮ ಕೈಗೊಳ್ಳುವುದಾಗಿ ಹಾಗೂ ಈ ಬಗ್ಗೆ ನವೆಂಬರ್ ಮೊದಲವಾರದಲ್ಲಿ ಸಭೆಯನ್ನು ಕರೆಯುವುದಾಗಿ ತಿಳಿಸಿದರು. ಅವರು ಮುಂದುವರೆದು ವಿದ್ಯಾರ್ಥಿಗಳ ಮನವಿಯಲ್ಲಿನ ಇತರ ವಿಷಯಗಳ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದರು.

11. ಕುಲಪತಿಗಳು ಮಾತನಾಡಿ, NAAC ಮೌಲ್ಯಾಂಕನದ ಪ್ರಕ್ರಿಯೆಯೆಗೆ ವಿಶ್ವವಿದ್ಯಾಲಯದ ವತಿಯಿಂದ ತಯಾರಿಸಲಾದ 2021–22ನೇ ಸಾಲಿನ IQAR ವರದಿಯನ್ನು ಸಲ್ಲಿಸಬೇಕಾಗಿದೆ ಎಂದು ತಿಳಿಸಿದರು.

**ನಿಣಯ:**

ಚರ್ಚೆಯ ನಂತರ, NAAC ಮೌಲ್ಯಾಂಕನದ ಪ್ರಕ್ರಿಯೆಯೆಗೆ ವಿಶ್ವವಿದ್ಯಾಲಯದ ವತಿಯಿಂದ 2021–22ನೇ ಸಾಲಿನ IQAR ವರದಿಯನ್ನು ಸಲ್ಲಿಸಲು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು SSR ವರದಿಯನ್ನು ಸಲ್ಲಿಸಲು ಸಿಂಡಿಕೇಟ್ ಕುಲಪತಿಗಳಿಗೆ ಅಧೀಕರಿಸಿತು.

ಕುಲಸಚಿವರು ಮಾತನಾಡಿ, 166ನೇ ಸಿಂಡಿಕೇಟ್ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಲು ಸಹಕರಿಸಿದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ವಿತ್ತಾಧಿಕಾರಿಯವರುಗಳು ಹಾಗೂ ಕುಲಪತಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ವಂದಾನರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

| | |
|---|---|
| **ಸಹಿ/–** | **ಸಹಿ/–** |
| **ಕುಲಸಚಿವರು** | **ಕುಲಪತಿಯವರು** |

**//ಪ್ರತಿ//**

**ಕುಲಸಚಿವರು** 7/11/22